
ದೆಹಲಿ ಕರ್ನಾಟಕ ಸಂಘದ

# ಅಭಿಮತ

ಏಪ್ರಿಲ್ 2015
ಬೆಲೆ ರೂ. 1






## ನೃತ್ಯ ಸಂಭ್ರಮ






**ದೆಹಲಿಯ ಹೊಸ ತಲೆಮಾರಿನ ಕನ್ನಡ ಪ್ರತಿಭೆಗಳು**

# ಅಭಿಮತ

ದೆಹಲಿ ಕರ್ನಾಟಕ ಸಂಘದ ಅಭಿಮತ

ಸಂಪುಟ 25 ಸಂಚಿಕೆ 7
ಏಪ್ರಿಲ್ 2015, ಬೆಲೆ ರೂ. 1



**ಅಭಿಮತ ಸಂಪಾದಕ ಮಂಡಳಿ**

ಬಾಲಕೃಷ್ಣ ನಾಯ್ಕ್ ಡಿ.
ಸವಿತಾ ಇನಾಮದಾರ್
ಪ್ರಕಾಶ್ ಶೆಟ್ಟಿ ಉಳೆಪಾಡಿ
ಆಶಾಲತಾ ಎಂ.

**ದೆಹಲಿ ಕರ್ನಾಟಕ ಸಂಘದ ಕಾರ್ಯಕಾರಿ ಸಮಿತಿ**

**ಅಧ್ಯಕ್ಷ**
ವಸಂತ ಶೆಟ್ಟಿ ಬೆಳ್ಳಾರೆ: 9958697823

**ಉಪಾಧ್ಯಕ್ಷರು**
ಬಸವರಾಜು ಬಿ.ಕೆ.: 9810391608
ಆಶಾಲತಾ ಎಂ.: 9891249149

**ಪ್ರಧಾನ ಕಾರ್ಯದರ್ಶಿ**
ಸಿ.ಎಂ.ನಾಗರಾಜ: 9811325440

**ಕೋಶಾಧಿಕಾರಿ**
ಡಾ. ಅವನೀಂದ್ರನಾಥ್ ರಾವ್ 9868123382

**ಜಂಟಿ ಕಾರ್ಯದರ್ಶಿಗಳು**
ಎಸ್.ಸಿ. ಹೇಮಲತ: 9971121636
ಟಿ.ಎಂ. ಮೈಲಾರಪ್ಪ: 9013210175

**ಸಮಿತಿ ಸದಸ್ಯರು**
ಆಂಜನಿ ಗೌಡ: 9811165354
ರಾಧಾಕೃಷ್ಣ: 9818252183
ಪೂಜಾ ಪಿ. ರಾವ್: 9810882498
ವಿ.ವಿ.ಬಿರಾದಾರ: 9873005409
ಪಿ.ಸಿ.ಶ್ರೀನಿವಾಸ್: 9868170790
ಆನಂದ ಮುರಗೋಡ: 9312931233
ಆಶಾ ಶ್ಯಾಮಸುಂದರ್: 9871256177
ಬಸವರಾಜ ಮೇಟಿ: 9810282951
ಟಿ.ಪಿ. ಬೆಳ್ಳಿಯಪ್ಪ: 9654555795
ಕುಸುಮಾ ಪಿ. ನಂದರಗಿ 9868393955

**ವಿಶೇಷ ಆಹ್ವಾನಿತರು**
ಐ. ರಾಮು ಮೋಹನ್ ರಾವ್
ಡಾ. ಶರತ್ ಎಸ್. ಜವಳಿ
ಡಾ. ಪುರುಷೋತ್ತಮ ಬಿಳಿಮಲೆ


## ನೇರ ಮಾತು

ದೆಹಲಿ ಕರ್ನಾಟಕ ಸಂಘದ ಸಾಂಸ್ಕೃತಿಕ ಸಮುಚ್ಚಯವನ್ನು 2004ರಲ್ಲಿ ಡಾ. ಪುರುಷೋತ್ತಮ ಬಿಳಿಮಲೆ ಅವರ ಅಧ್ಯಕ್ಷತೆಯ ಅವಧಿಯಲ್ಲಿ ಕಟ್ಟಲಾಯಿತು. ಅದರ ದಶಮಾನೋತ್ಸವವನ್ನು ನಾವು ಈ ವರ್ಷ ವಿವಿಧ ಕಾರ್ಯಕ್ರಮಗಳನ್ನು ನಿರಂತರವಾಗಿ ಆಯೋಜಿಸುವುದರ ಮೂಲಕ ಆಚರಿಸುತ್ತಿದ್ದೇವೆ. ಕಟ್ಟಡವನ್ನು ಕಟ್ಟಿ ಅದನ್ನು ಸಂಘವೆಂದು ಕರೆದರೆ ಸಾಲದು, ಕನ್ನಡಿಗರ ಮನಸ್ಸುಗಳನ್ನು ಒಂದಾಗಿಸಬೇಕು, ಪರ-ವಿರೋಧಗಳನ್ನು ಗಮನಿಸಿ ಕಾರ್ಯವಹಿಸಬೇಕು, ಕನ್ನಡಿಗರ ಬೇಕು-ಬೇಡಗಳಿಗೆ ಸ್ಪಂದಿಸಬೇಕು. ಸಂಘದ ಕಟ್ಟಡದಲ್ಲಿ ಇಟ್ಟಿಗೆಯು ಹೆಣೆದುಕೊಂಡಂತೆ, ಕನ್ನಡದ ಮನಸುಗಳು ಒಂದಾಗಿ, ಸಂಘ ಸುಭದ್ರವಾಗಬೇಕು.

ಭಾರತವು ವಿವಿಧ ಭಾಷೆ ಮತ್ತು ಸಂಸ್ಕೃತಿಗಳನ್ನು ಹೊಂದಿದೆ. ಈ ಎಲ್ಲವನ್ನು ಪ್ರೀತಿಸುವ ಮತ್ತು ಗೌರವಿಸುವ ಸುಸಂಸ್ಕೃತ ಮನೋಭಾವ ಕನ್ನಡಿಗರದ್ದು. ನಾವು ಎಲ್ಲಿ ಹೋದರೂ ಕೂಡಾ ಅಲ್ಲಿಯ ಜೀವನಕ್ರಮದ ಜೊತೆಗೆ ಹೊಂದಿಕೊಳ್ಳುತ್ತೇವೆ. ಸಂಸ್ಕೃತಿ ಮತ್ತು ಭಾಷೆಗಳನ್ನು ಕಲಿತು ಅವರೊಂದಿಗೆ ಬೆರೆತು ಕರ್ನಾಟಕದ ಸಂಸ್ಕೃತಿಯನ್ನು ಅವರೊಂದಿಗೆ ಹಂಚಿಕೊಳ್ಳುವ ಪ್ರಯತ್ನವನ್ನು ಮಾಡುತ್ತೇವೆ. ನಿರಾಕರಿಸುವ ಗುಣ ಕನ್ನಡಿಗರದ್ದಲ್ಲ, ಬದಲು ಸ್ವೀಕರಿಸುವ, ಒಳಗೊಳ್ಳುವ ಗುಣ ಅವರದ್ದು.

"ಬೆಂಗಳೂರು, ಮೈಸೂರು ಮೈನೆ ದೇಖಾ ಹೈ. . . . ಮೈಸೂರು ಕೂರ್ಗ್ ಬಹುತ್ ಸುಂದರ್ ಹೈ, ಹಂಪಿ. . . ಬೇಲೂರ್ ಕಮಾಲ್ ಹೈ. . . .ಕರ್ನಾಟಕ್ ಕೆ ಲೋಗ್ ಬಹೂತ್ ಅಚ್ಚೆ ಹೈ". ಇದು ಸಾಮಾನ್ಯವಾಗಿ ಕನ್ನಡೇತರರು ಕರ್ನಾಟಕದ ಬಗ್ಗೆ ಹೇಳುವ ಮಾತುಗಳು. ಅಂದರೆ ಕರ್ನಾಟಕ ಬಗ್ಗೆ ಅವರಿಗೆ ಇರುವ ಗೌರವವನ್ನು ನಾವು ಈ ಮಾತುಗಳ ಮೂಲಕ ತಿಳಿಯಬಹುದು. ಉತ್ತರ ಭಾರತದ ವಿವಿಧ ಕಚೇರಿಗಳಲ್ಲಿ ಕೆಲಸ ಮಾಡುವ ಕನ್ನಡಿಗರೆಂದರೆ ಎಲ್ಲರಿಗೂ ಅಚ್ಚು ಮೆಚ್ಚು. ಈ ಹಿನ್ನೆಲೆಯಲ್ಲಿ ಕರ್ನಾಟಕ ರಾಜ್ಯದ ವೈಶಿಷ್ಟ್ಯಗಳ ಬಗೆಗೆ, ಭಾಷೆಗಳ, ಸಂಸ್ಕೃತಿಗಳ, ಸಾಹಿತ್ಯದ, ಮತ್ತಿತರ ಸಾಧನೆಗಳ ಬಗ್ಗೆ ಕನ್ನಡೇತರರಿಗೆ ತಿಳಿಹೇಳುವ ಕೆಲಸವನ್ನು ಮಾಡುತ್ತಾ, ರಾಜ್ಯದ ಗೌರವವನ್ನು ಬೆಳೆಸುವ ಪ್ರಯತ್ನವನ್ನು ಹೊರ ರಾಜ್ಯದಲ್ಲಿ ನೆಲೆ ನಿಂತ ಕನ್ನಡಿಗರು ಮಾಡಬೇಕು.

ಇದರ ಜೊತೆ ಜೊತೆಗೆ, ಹೊರನಾಡಿನಲ್ಲಿ ಹುಟ್ಟಿ ಬೆಳೆದ ಕನ್ನಡದ ಮಕ್ಕಳನ್ನು ನಮ್ಮದೇ ಸಂಸ್ಕೃತಿಯ ಭಾಗವಾಗಿ ಬೆಳೆಸುವ ಪ್ರಯತ್ನವನ್ನು ಮಾಡಬೇಕಾಗಿದೆ. ಹೊರ ನಾಡಿನಲ್ಲಿ ಹುಟ್ಟಿ ಬೆಳೆವ ಮಕ್ಕಳು ಕರ್ನಾಟಕದಿಂದ ದೂರವಾಗುತ್ತಿರುವ ಪರಿಸ್ಥಿತಿ ಎದುರಾಗಿದೆ. ಹೊರ ಪ್ರದೇಶದಲ್ಲಿ ವಾಸಿಸುತ್ತಿರುವ ಅವರಿಗೆ ನಮ್ಮೂರು ಅಪರಿಚಿತ. ವರುಷಕ್ಕೊಮ್ಮೆ ರಜಾದಿನಗಳನ್ನು ಕಳೆಯಲು ಅವರೆಲ್ಲ ಊರಿಗೆ ಹೋಗುವುದು ಹೌದಾದರೂ ಅದು ಸುಮಾರಾಗಿ ಪಿಕ್ನಿಕ್ ಮಾದರಿಯಲ್ಲಿಯಷ್ಟೇ ಇರುತ್ತದೆ. ಸಂಸ್ಕೃತಿಯೊಂದರ ಆಳ ಮತ್ತು ವಿಸ್ತಾರಗಳ ಬಗೆಗೆ ಈ ರಜಾದಿನಗಳ ಭೇಟಿ ಸಾಕಾಗುವುದಿಲ್ಲ. ಕಾರಣ ನಮ್ಮ ಹೊರನಾಡಿನ ಹೊಸ ತಲೆಮಾರಿನ ಮಕ್ಕಳಿಗೆ ನಾವು ವಿಶೇಷವಾದ ಕಾರ್ಯಕ್ರಮಗಳನ್ನು ರೂಪಿಸಬೇಕಾಗುತ್ತದೆ. ಹೊರನಾಡಿನಲ್ಲಿ ಸಕ್ರಿಯವಾಗಿರುವ ಕನ್ನಡ ಪರ ಸಂಘ ಸಂಸ್ಥೆಗಳು ಮೊದಲು ಈ ಹೊಸ ತಲೆಮಾರಿನ ಮಕ್ಕಳನ್ನು ತಮ್ಮೆಡೆಗೆ ಬರುವಂತೆ ಕಾರ್ಯಕ್ರಮಗಳನ್ನು ಆಯೋಜಿಸಬೇಕು. ಆನಂತರ ಅವರು ನಮ್ಮ ಸಂಸ್ಕೃತಿಯ ಭಾಗವಾಗುವಂತೆ ನೋಡಿಕೊಳ್ಳಬೇಕು. ಕರ್ನಾಟಕ ಸರಕಾರ, ಸಂಸ್ಕೃತಿ ಇಲಾಖೆಗಳು ಈ ಕುರಿತು ಯೋಚಿಸಬೇಕು. ಈ ನಿಟ್ಟಿನಲ್ಲಿ ಕ್ರಿಯಾಶೀಲವಾಗಲು ದೆಹಲಿ ಕರ್ನಾಟಕ ಸಂಘವು ಕೆಲವು ವಿಶೇಷ ಯೋಜನೆಗಳನ್ನು ರೂಪಿಸಲಿದೆ. ನಿಮ್ಮ ಬೆಂಬಲ ಅಗತ್ಯ ಇರಲಿ. ಅ

***ವಸಂತ ಶೆಟ್ಟಿ ಬೆಳ್ಳಾರೆ, ಅಧ್ಯಕ್ಷರು***

## ಮುನ್ನೋಟ

ಸಾಂಸ್ಕೃತಿಕ ಸಮುಚ್ಚಯದ ದಶಮಾನೋತ್ಸವದ ಅಂಗವಾಗಿ ಪ್ರತಿ ವಾರ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಏರ್ಪಡಿಸುತ್ತಿದ್ದೇವೆ. ಸ್ಥಳೀಯ ಕಲಾವಿದರಿಗೆ ನೃತ್ಯ, ನಾಟಕ ಮತ್ತು ಸಂಗೀತಗಳಲ್ಲಿ ತರಬೇತಿ ನೀಡಿ ಅವರುಗಳಿಂದ ಕಾರ್ಯಕ್ರಮಗಳನ್ನು ಆಯೋಜಿಸಲಾಗುತ್ತಿದೆ. ಈಗಾಗಲೇ ಮಂಗಳೂರಿನ ಬಾಯ್ ಝೋನ್ ತಂಡದವರಿಂದ ನೃತ್ಯ ತರಬೇತಿ ಪಡೆದ ಸುಮಾರು 110 ನಮ್ಮ ಸ್ಥಳೀಯ ಕಲಾವಿದರುಗಳು ನೀಡಿದ ನೃತ್ಯ ಸಂಭ್ರಮ ಕಾರ್ಯಕ್ರಮ ಅದ್ಭುತವಾಗಿ ಮೂಡಿಬಂದಿತು.

ಮೈಸೂರಿನ ರಂಗಾಯಣದಿಂದ ಬಂದಿರುವ ಶ್ರೀ ಮಂಜುನಾಥ ಬೆಳೆಕೆರೆ ಅವರ ನಿರ್ದೇಶನದಲ್ಲಿ ಸ್ಥಳೀಯ ಕಲಾವಿದರುಗಳಿಗೆ ನಾಟಕ ತರಬೇತಿ ನಡೆಯುತ್ತಿದೆ. ನಾಟಕ ಪ್ರದರ್ಶನ ಇದೇ ತಿಂಗಳ 19ರಂದು ಪ್ರದರ್ಶನಗೊಳ್ಳಲಿದೆ. ಸಂಘದಿಂದ ನೀಡುವ ಮೊದಲ ಕನ್ನಡ ಭಾರತಿ ಪ್ರಶಸ್ತಿಯನ್ನೂ ಕೂಡ ಅಂದೇ ಶ್ರೀ ಎಂ.ವಿ.ನಾರಾಯಣ ರಾವ್ ಅವರಿಗೆ ಪ್ರದಾನ ಮಾಡಲಾಗುತ್ತಿದೆ.

ಏಪ್ರಿಲ್ 12ರಂದು ಹೆಸರಾಂತ ಸಂಗೀತ ನಿರ್ದೇಶಕ ಗುರುಕಿರಣ್ ಮತ್ತು ತಂಡದಿಂದ ತುಳು-ಕೊಂಕಣಿ ಸಂಭ್ರಮ ಕಾರ್ಯಕ್ರಮ, ಮೇ ತಿಂಗಳಿನ 2ರಂದು ಅಕ್ಕ ಮತ್ತು ಬಸವ ಜಯಂತಿ ಹಾಗೂ ಮೇ 3ರಂದು ಕನಕ ಜಯಂತಿಯನ್ನು ಹಮ್ಮಿಕೊಳ್ಳಲಾಗಿದೆ. ಕನಕ ಜಯಂತಿ ಕಾರ್ಯಕ್ರಮದಲ್ಲಿ ಕರ್ನಾಟಕದ ಮಾನ್ಯ ಮುಖ್ಯಮಂತ್ರಿಗಳು ಭಾಗವಹಿಸುವ ನಿರೀಕ್ಷೆಯಿದೆ. ಈ ಎಲ್ಲಾ ಕಾರ್ಯಕ್ರಮಗಳ ನಡುವೆ ಸಂಘದ ಸದಸ್ಯರಿಗೆ ಗುರುತಿನ ಚೀಟಿಯನ್ನು ನೀಡುವ ಪ್ರಕ್ರಿಯೆ ಪ್ರಾರಂಭವಾಗಿದೆ. ಗುರುತಿನ ಚೀಟಿಯಿಂದ ಸಂಘದ ಕ್ಯಾಂಟೀನ್‌ನಲ್ಲಿ ನಿರಂತರ 15% ರಿಯಾಯಿತಿ ಸಂಘದ ಸದಸ್ಯರಿಗೆ ಸಿಗಲಿದೆ. ಅ

***ಸಿ.ಎಂ. ನಾಗರಾಜ, ಪ್ರಧಾನ ಕಾರ್ಯದರ್ಶಿ***


**DELHI KARNATAKA SANGHA** Rao Tularam Marg, Sector-12, R K Puram, New Delhi-110022.
Phone: 011-26109615. 011-65643615 email:dksangha@gmail.com
www.delhikarnatakasangha.com

ದೆಹಲಿ ಕರ್ನಾಟಕ ಸಂಘದಲ್ಲಿ
# ತಿಂಗಳ ಕಾರ್ಯಕ್ರಮ

## ದಶಮಾನೋತ್ಸವ ವಿಶೇಷ ಕಾರ್ಯಕ್ರಮ

**19 ಏಪ್ರಿಲ್ 2015** ಭಾನುವಾರ ಸಂಜೆ 5.00 ಗಂಟೆಗೆ

ಶ್ರೀ ಎಂ.ವಿ. ನಾರಾಯಣ ರಾವ್ ಅವರಿಗೆ
ದೆಹಲಿ ಕರ್ನಾಟಕ ಸಂಘದ ಪ್ರಥಮ
'ಕನ್ನಡ ಭಾರತಿ' ಪ್ರಶಸ್ತಿ ಪ್ರದಾನ
ಮುಖ್ಯ ಅತಿಥಿ : ಶ್ರೀ ಎಂ.ಎಸ್. ಸತ್ಯು, ಖ್ಯಾತ ರಂಗಕರ್ಮಿಗಳು
ಮೈಸೂರು ರಂಗಾಯಣದ ಮಂಜುನಾಥ ಬೆಳಕೆರೆ ನಿರ್ದೇಶನದ ನಾಟಕ–ಸೇವಂತಿ ಪ್ರಸಂಗ, ಪ್ರಸ್ತುತಪಡಿಸುವವರು ದೆಹಲಿ ಕರ್ನಾಟಕ ಸಂಘದ ಕಲಾವಿದರು.

## ವಚನಕಾರರ ಜಯಂತಿ ಕಾರ್ಯಕ್ರಮ

**2 ಮೇ 2015** ಶನಿವಾರ ಸಂಜೆ 6.00 ಗಂಟೆಗೆ

ಅಗ್ರಗಣ್ಯ ವಚನಕಾರರಾದ ಬಸವೇಶ್ವರ ಮತ್ತು ಅಕ್ಕಮಹಾದೇವಿ ಅವರ ಜಯಂತಿ ಕಾರ್ಯಕ್ರಮ

## ಕನಕದಾಸರ ಒಂದು ವಿಶೇಷ ಕಾರ್ಯಕ್ರಮ

**3 ಮೇ 2015** ಭಾನುವಾರ ಬೆಳಿಗ್ಗೆ 10.30 ಗಂಟೆಗೆ

ಉಪನ್ಯಾಸ–ಸಂಗೀತ–ನೃತ್ಯ ಇತ್ಯಾದಿ ವಿಶೇಷ ಕಾರ್ಯಕ್ರಮಗಳು

## ನಾಟಕ

**9 ಮೇ 2015** ಶನಿವಾರ ಸಂಜೆ 6.00 ಗಂಟೆಗೆ

ರಂಗಭೂಮಿ, ಉಡುಪಿ ಪ್ರಸ್ತುತಪಡಿಸುವ
ಕನ್ನಡ ನಾಟಕ 'ಕಾಲಚಕ್ರ'.
ರಚನೆ : ಜಯಂತ ದಳವಿ, ಅನುವಾದ : ಎಚ್.ಕೆ. ಕರ್ಕೇರಾ

### ಸಂಘದ ಸಾಂಸ್ಕೃತಿಕ ಸಮುಚ್ಚಯದ ದಶಮಾನೋತ್ಸವದ ಅಂಗವಾಗಿ

**11 ರಿಂದ 16 ಮೇ 2015** ಸಂಗೀತ ತರಬೇತಿ

ರಾಮಚಂದ್ರ ಹಡಪದ್ ಅವರಿಂದ

## ಕೊಡವ ಸಂಭ್ರಮ

**16 ಮೇ 2015** ಶನಿವಾರ ಸಂಜೆ 6.00 ಗಂಟೆಗೆ

ಕೊಡವ ಸಾಂಸ್ಕೃತಿಕ ಸಂಭ್ರಮ

**17 ಮೇ 2015** ಭಾನುವಾರ ಸಂಜೆ 4.30 ಗಂಟೆಗೆ

ಸಂಗೀತ ಸಂಭ್ರಮ: ಸಂಗೀತ ತರಬೇತಿ ಪಡೆದ ದೆಹಲಿ ಕರ್ನಾಟಕ ಸಂಘದ ಸದಸ್ಯರು ಮತ್ತು ರಾಮಚಂದ್ರ ಹಡಪದ್ ಅವರಿಂದ

## ಕನ್ನಡ ತರಗತಿಗಳು

ದೆಹಲಿ ಕರ್ನಾಟಕ ಸಂಘದಲ್ಲಿ ಕನ್ನಡ ತರಗತಿಗಳನ್ನು ಪ್ರತಿ ಶನಿವಾರ ಮತ್ತು ಭಾನುವಾರದಂದು ಆರಂಭಿಸಲಾಗಿದೆ. ಕನ್ನಡ ಕಲಿಯಲಿಚ್ಛಿಸುವವರು ತಮ್ಮ ಹೆಸರನ್ನು ಸಂಘದಲ್ಲಿ ನೊಂದಾಯಿಸಬೇಕಾಗಿ ವಿನಂತಿ.

## ಸಂಘದ ಗುರುತು ಚೀಟಿ

ದೆಹಲಿ ಕರ್ನಾಟಕ ಸಂಘದ ಸದಸ್ಯರಿಗೆ (ದೆಹಲಿ ಮತ್ತು ಎನ್.ಸಿ.ಆರ್. ನಲ್ಲಿರುವವರಿಗೆ ಮಾತ್ರ) ಐಡೆಂಟಿಟಿ ಕಾರ್ಡ್‌ನ್ನು ನೀಡುವ ಪ್ರಕ್ರಿಯೆಯನ್ನು ಪ್ರಾರಂಭಿಸಲಾಗಿದೆ. ಸದಸ್ಯರು ತಮ್ಮ ವಿಳಾಸ, ದೂರವಾಣಿಗಳು ಬದಲಾಗಿದ್ದಲ್ಲಿ ಕೂಡಲೇ ಲಿಖಿತ ಮೂಲಕ ಸಂಘದ ಕಾರ್ಯಾಲಯಕ್ಕೆ ತಿಳಿಸಬೇಕಾಗಿ ವಿನಂತಿ. ಜತೆಗೆ ಇತ್ತೀಚಿನ ಭಾವಚಿತ್ರವನ್ನು ಕಳುಹಿಸಿರಿ.

*ಪ್ರಧಾನ ಕಾರ್ಯದರ್ಶಿ*

## ಸಂಘದಲ್ಲಿ ಇತರ ಸಂಘ ಸಂಸ್ಥೆಗಳ ಕಾರ್ಯಕ್ರಮ

**10 ಮೇ 2015** ಭಾನುವಾರ ಮಧ್ಯಾಹ್ನ 2.00 ಗಂಟೆಗೆ

ದೆಹಲಿ ತುಳುಸಿರಿ ಆಯೋಜಿಸುವ
ಯು. ಪ್ರಭಾಕರ ರಾವ್ ಸ್ಮರಾಣಾರ್ಥ
ಡೆಲ್ಲಿ ತುಳು ರಂಗ ಪರ್ಬ
ರಂಗಭೂಮಿ, ಉಡುಪಿ ಪ್ರಸ್ತುತಪಡಿಸುವ ನಾಟಕ–ನಾಗಮಂಡಲ
ರಚನೆ : ಗಿರೀಶ್ ಕಾರ್ನಾಡ
ಅನುವಾದ : ಡಾ. ಕಾತ್ಯಾಯಿನಿ ಕುಂಜಿಬೆಟ್ಟು.
ಸುಮನಸ (ರಿ) ಕೊಡವೂರು ಪ್ರಸ್ತುತಪಡಿಸುವ ನಾಟಕ
ಕೋಟಿ ಚೆನ್ನಯ, ರಚನೆ : ಡಾ. ಜಾನಕಿ ಬ್ರಹ್ಮಾವರ.

## ಯಕ್ಷಗಾನ

**11 ಜುಲೈ 2015** ಶನಿವಾರ ಸಂಜೆ 9.30 ಗಂಟೆಗೆ

ದೆಹಲಿಯಲ್ಲಿ ಮೊದಲ ಬಾರಿಗೆ ಇಡೀ ರಾತ್ರಿ ಯಕ್ಷಗಾನ ಪ್ರದರ್ಶನ
ತೆಂಕು ತಿಟ್ಟಿನ ಪ್ರಖ್ಯಾತ ಕಲಾವಿದರ ಕೂಡುವಿಕೆಯಿಂದ
ಸಂಪೂರ್ಣ ಶ್ರೀದೇವೀ ಮಹಾತ್ಮೆ
ಎರಡನೇ ಶನಿವಾರ, ಜುಲೈ 11, 2015ರಂದು
ರಾತ್ರಿ 9.30ರಿಂದ ಮರುದಿನ ಮುಂಜಾನೆ 6.00ಗಂಟೆವರೆಗೆ

## ವೈದ್ಯಕೀಯ ಸಲಹೆಗಳು

**ಡಾ. ನಿರಂಜನ್ ನಾಯ್ಕ್,** MBBS, MS (AIIMS), ONCO-SURGERY (IRCH, AIIMS) ಅವರಿಂದ ಕ್ಯಾನ್ಸರ್ ಸಂಬಂಧಿತ ರೋಗಗಳಿಗೆ ಉಚಿತ ಸಲಹೆ ಭಾನುವಾರ 19 ಏಪ್ರಿಲ್ 2015ರಂದು ಬೆಳಿಗ್ಗೆ 10 ಗಂಟೆಯಿಂದ.

**ಡಾ. ಗುರುರಾಜ ಸಂಗೊಂದಿಮಠ** MS, FNB, Spine Surgeon, ಅವರಿಂದ ಬೆನ್ನು ಮೂಳೆಗೆ ಸಂಬಂಧಿತ ರೋಗಗಳಿಗೆ ಉಚಿತ ವೈದ್ಯಕೀಯ ಸಲಹೆ ಭಾನುವಾರ 26, ಏಪ್ರಿಲ್ 2015 ರಂದು ಬೆಳಿಗ್ಗೆ 11 ಗಂಟೆಯಿಂದ.

**ಡಾ. ಭೀಮ್ ಭಟ್** M.D. (AYU) ಅವರಿಂದ ಉಚಿತ ಆಯುರ್ವೇದ ವೈದ್ಯಕೀಯ ಸಲಹೆ ಭಾನುವಾರ 26 ಏಪ್ರಿಲ್ 2015 ರಂದು ಸಾಯಂಕಾಲ 4 ಗಂಟೆಯಿಂದ.

**ದೆಹಲಿ ಕರ್ನಾಟಕ ಸಂಘದ ಸುಸಜ್ಜಿತವಾದ ಆರ್ಟ್ ಗ್ಯಾಲರಿ ಕಲಾ ಪ್ರದರ್ಶನಕ್ಕಾಗಿ ಸಿದ್ಧವಿದೆ.**
**ಹೆಚ್ಚಿನ ಮಾಹಿತಿಗಾಗಿ ದೆಹಲಿ ಕರ್ನಾಟಕ ಸಂಘದ ಕಾರ್ಯಾಲಯವನ್ನು ಸಂಪರ್ಕಿಸಿರಿ. ಫೋನ್ : 8860848585 – 011–26109615, 26104818**

# ಸಂಘದ ವಿದ್ಯಾರ್ಥಿ ವೇತನ ವಿತರಣೆ




ದೆಹಲಿ ಕರ್ನಾಟಕ ಸಂಘವು ಪ್ರತಿವರ್ಷ ನೀಡುತ್ತಿರುವ ವಿದ್ಯಾರ್ಥಿ ವೇತನದ ವಿತರಣೆಯಲ್ಲಿ ಅರ್ಹತೆ ಮತ್ತು ಅವಶ್ಯಕತೆಯ ಆಧಾರದ ನಿಯಮಗಳನ್ನು ಈ ವರ್ಷ ಕಟ್ಟುನಿಟ್ಟಿನಲ್ಲಿ ಪಾಲಿಸಿಕೊಂಡು ಅರ್ಹ ವಿದ್ಯಾರ್ಥಿಗಳೆಲ್ಲರಿಗೂ ಉತ್ತಮ ಮೊತ್ತವನ್ನು ನೀಡಲಾಗಿದೆ ಎಂದು ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷ ಶ್ರೀ ವಸಂತ ಶೆಟ್ಟಿ ಬೆಳ್ಳಾರೆ ಅವರು ತಿಳಿಸಿದರು.

ದೆಹಲಿ ಕರ್ನಾಟಕ ಸಂಘದಲ್ಲಿ ನಡೆದ ವಿಶೇಷ ಸಮಾರಂಭದಲ್ಲಿ ಇದೇ ಮಾರ್ಚ್ 22ರಂದು ವಿದ್ಯಾರ್ಥಿ ವೇತನ ವಿತರಣೆ ಮಾಡಿ ಅವರು ಮಾತಾಡುತ್ತಿದ್ದರು. ಇದೇ ಸಂದರ್ಭದಲ್ಲಿ ಯಕ್ಷಸಿರಿ ಬೆಂಗಳೂರು ತಂಡದಿಂದ 'ಮಾಗದ ವಧೆ' ಯಕ್ಷಗಾನ ಕಾರ್ಯಕ್ರಮ ಮತ್ತು ದೆಹಲಿಯ ಗೋಕರ್ಣ ಮಂಡಳದವರಿಂದ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆದವು.

ಬೆಂಗಳೂರಿನಿಂದ ಆಗಮಿಸಿದ್ದ ದೆಹಲಿ ಕರ್ನಾಟಕ ಸಂಘದ ಮಾಜಿ ಉಪಾಧ್ಯಕ್ಷೆ ಶ್ರೀಮತಿ ಉಷಾ ಭರತಾದ್ರಿ ಮತ್ತು ಗೋಕರ್ಣ ಮಂಡಳದ ಅಧ್ಯಕ್ಷ ಶ್ರೀ ನಾರಾಯಣ ಭಟ್ ಅವರು ಸಮಾರಂಭದ ಮುಖ್ಯ ಅತಿಥಿಗಳಾಗಿದ್ದರು.

'ದೆಹಲಿ ಕರ್ನಾಟಕ ಸಂಘವು ನಮಗೆಲ್ಲರಿಗೂ ವೇದಿಕೆಯೊಂದನ್ನು ಕೊಟ್ಟಿದೆ. ದೆಹಲಿಯಲ್ಲಿರುವ ಕನ್ನಡಿಗರು ದೆಹಲಿಯಲ್ಲಿರುವಷ್ಟು ದಿನ ಇಲ್ಲೇ ಇರಿ, ಯಾಕೆಂದರೆ ಇಲ್ಲಿ ನಿಮ್ಮದೇ ಆದ ಒಂದು ಸಾಮಾಜಿಕ ಬದುಕಿದೆ' ಎಂದು ಶ್ರೀಮತಿ ಉಷಾ ಭರತಾದ್ರಿ ಅವರು ಈ ಸಂದರ್ಭದಲ್ಲಿ ಮಾತಾಡುತ್ತಾ ಹೇಳಿದರು. ಸಂಘವು ನೀಡುತ್ತಿರುವ ವಿದ್ಯಾರ್ಥಿ ವೇತನವನ್ನು ಸಂಘದ ಮಾಜಿ ಅಧ್ಯಕ್ಷರ ಹೆಸರಲ್ಲಿ ನೀಡುವಂತಹ ಬದಲಾವಣೆಯನ್ನು ಮಾಡಿರುವ ಪ್ರಯತ್ನವನ್ನು ಅವರು ಶ್ಲಾಘಿಸಿದರು.

ಉಪಾಧ್ಯಕ್ಷೆ ಶ್ರೀಮತಿ ಆಶಾಲತಾ ಎಂ ಅವರು ವಿದ್ಯಾರ್ಥಿವೇತನ ವಿತರಣಾ ಕಾರ್ಯಕ್ರಮವನ್ನು ಸಂಯೋಜಿಸಿದರು. ಶ್ರೀಮತಿ ಪೃಥ್ವಿ ಕಾರಿಂಜೆ ಕಾರ್ಯಕ್ರಮ ನಿರೂಪಿಸಿದರು. ಗೋಕರ್ಣ ಮಂಡಳದ ಶ್ರೀ ಆದಿತ್ಯ ನಾರಾಯಣ ಅವರು ವಂದನಾರ್ಪಣೆ ಸಲ್ಲಿಸಿದರು. ಅ



## ಅರ್ಹತೆ ಆಧಾರದ ಮೇಲೆ ವಿದ್ಯಾರ್ಥಿ ವೇತನ ಪಡೆದವರು

ದೆಹಲಿ ಕರ್ನಾಟಕ ಸಂಘದ 2014–15ರ ಸಾಲಿನ ವಿದ್ಯಾರ್ಥಿ ವೇತನವನ್ನು ಅರ್ಹತೆಯ ಆಧಾರದ ಮೇಲೆ ಪಡೆದವರು: ಅರವಿಂದ ಕುಮಾರ್ ಬಿರಾದಾರ್, ಕವನ ನರ್‌ಶೆಟ್ಟಿ, ಜೆ. ರಿಷಿ, ಶ್ರೇಯಾ, ಪ್ರಿಯಾಂಕ, ಶ್ರೀಧನ್ ಮೂರ್ತಿ, ಆರ್. ಗೌತಮ್, ಧ್ರುವ್ ಕಾಮ್‌ಶೆಟ್ಟಿ, ಸಿ. ಪುನೀತ್, ಕೆ. ದೀಪ್‌ಕ್ಷಿಕಾ ಗಣೇಶ್.

ಸಂಘದ ಮಾಜಿ ಅಧ್ಯಕ್ಷರ ಹೆಸರಲ್ಲಿ ನೀಡಲಾದ ವಿದ್ಯಾರ್ಥಿ ವೇತನವನ್ನು ಪಡೆವರು: ದಿ. ನರಹರಿ ರಾವ್ ಸ್ಮಾರಕ ವಿದ್ಯಾರ್ಥಿ ವೇತನ–ಸಿಂಚನಾ ಮೂರ್ತಿ, ದಿ. ಎ.ವಿ. ಪೈ ಸ್ಮಾರಕ ವಿದ್ಯಾರ್ಥಿ ವೇತನ–ಸಾಯಿ ಪ್ರಸಾದ್, ದಿ. ಡಾ. ವಿ.ಕೆ.ಆರ್.ವಿ. ರಾವ್ ಸ್ಮಾರಕ ವಿದ್ಯಾರ್ಥಿ ವೇತನ–ಶ್ರುತಿ ಭಜಂತ್ರಿ, ದಿ. ರಾಘವನ್ ಸ್ಮಾರಕ ವಿದ್ಯಾರ್ಥಿ ವೇತನ–ಬಿ.ಎಸ್. ಶಿವರಾಜ್, ದಿ. ಎಸ್.ವಿ. ಕೃಷ್ಣಮೂರ್ತಿ ರಾವ್ ಸ್ಮಾರಕ ವಿದ್ಯಾರ್ಥಿ ವೇತನ–ಪ್ರಶಾಂತ್ ಬಿರಾದಾರ್, ದಿ. ಜಿ.ವೈ. ಕೃಷ್ಣನ್ ಸ್ಮಾರಕ ವಿದ್ಯಾರ್ಥಿ ವೇತನ–ಪ್ರಸನ್ನ ಬಿರಾದಾರ್, ದಿ. ಗೋಪಾಲ ಶಾಸ್ತ್ರಿ ಸ್ಮಾರಕ ವಿದ್ಯಾರ್ಥಿ ವೇತನ–ಕೆ. ರಕ್ಷಿತಾ ಗಣೇಶ್ ಕೆ., ದಿ. ಎ.ಪಿ. ಕುಮಟಾಕರ್ ಸ್ಮಾರಕ ವಿದ್ಯಾರ್ಥಿ ವೇತನ–ಬಿ.ಎನ್. ದೀಪಾಂಕನ್, ದಿ. ಕೆ.ಆರ್. ನಾಗರಾಜ ಸ್ಮಾರಕ ವಿದ್ಯಾರ್ಥಿ ವೇತನ–ರೊಹನ್ ರಂಗನಾಥ್ ಮತ್ತು ಕವಿತಾ ಮೇತ್ರೆ.

ದಿ. ಅಶ್ವಥ್ ಮತ್ತು ಈಶ್ವರಪ್ಪ ಮುರಗೋಡ ಸ್ಮಾರಕ ವಿದ್ಯಾರ್ಥಿ ವೇತನವನ್ನು ಅಭಿಜಿತ್ ಯು. ಪೈ ಅವರಿಗೆ ನೀಡಲಾಯಿತು. ಅವಶ್ಯಕತೆಯ ಆಧಾರದ ಮೇಲೆ ಮಧುಸೂದನ್ ಸಿ. ಪೂಜಾರಿ, ಎನ್. ಮಾನ್ಸಿ, ದರ್ಶನ್ ಎನ್. ಅಭಿಷೇಕ್ ಬಿರಾದಾರ, ಸ್ನೇಹಾ ಬಿರಾದಾರ, ಮಧು ಜಿ., ಶ್ರೇಯಾ, ಶ್ವೇತಾ ಜಿ., ಅನ್ನಪೂರ್ಣೇಶ್ವರಿ ಪಿ. ರೀಥಿ, ಹರ್ಷಿತಾ ಪೂಜಾರಿ ಮತ್ತು ಪ್ರಿಯಾಂಕ ಅವರಿಗೆ ಸಂಘದ ವತಿಯಿಂದ ವಿದ್ಯಾರ್ಥಿ ವೇತನವನ್ನು ನೀಡಲಾಯಿತು. ಅ

# ಮಲ್ಲಿಕಾರ್ಜುನ ಎಂ. ಕನ್ನೂರ ಅವರ ಚಿತ್ರಕಲಾ ಪ್ರದರ್ಶನ

"ದೆಹಲಿ ಕರ್ನಾಟಕ ಸಂಘದ ಆರ್ಟ್ ಗ್ಯಾಲರಿಯ ಸ್ಥಾಪನೆಯಿಂದ ಕರ್ನಾಟಕದ ಗ್ರಾಮೀಣ ಕಲಾವಿದರಿಗೆ ದೆಹಲಿಯಂಥ ಮಹಾನಗರದಲ್ಲಿ ಚಿತ್ರಕಲಾ ಪ್ರದರ್ಶನ ನೀಡುವ ಸುವರ್ಣಾವಕಾಶ ಒದಗಿಸಿ ಕಲಾವಿದನ ಆತ್ಮವಿಶ್ವಾಸ ಹೆಚ್ಚಿಸಿ ಉತ್ತಮ ಕೃತಿ ನಿರ್ಮಾಣದತ್ತ ಕಲಾವಿದನನ್ನು ಪ್ರಚೋದಿಸುವಂತಹ ಚಟುವಟಿಕೆಯಾಗಿದೆ. ಇದು ಒಂದು ರೀತಿಯಲ್ಲಿ ತಾಯಿ ಮಗುವನ್ನು ಬೆನ್ನು ತಟ್ಟಿ ಪ್ರೋತ್ಸಾಹಿಸುವ ಕಾರ್ಯದಂತೆಯೇ ಸರಿ" ಎಂದು ದೆಹಲಿಯ ಸುಪ್ರಸಿದ್ಧ ಚಿತ್ರಕಲಾವಿದರಾದ ಈರಣ್ಣ ಜಿ.ಆರ್. ಅವರು ಹೇಳಿದರು.

ಅವರು ಬಾಗಲಕೋಟೆಯ ಚಿತ್ರಕಲಾವಿದ ಮಲ್ಲಿಕಾರ್ಜುನ ಎಂ. ಕನ್ನೂರ ಅವರ ಚಿತ್ರಕಲಾ ಪ್ರದರ್ಶನವನ್ನು ದೆಹಲಿ ಕರ್ನಾಟಕ ಸಂಘದ ಆರ್ಟ್ ಗ್ಯಾಲರಿಯಲ್ಲಿ ಇದೇ ಮಾರ್ಚ್ 19ರಂದು ಉದ್ಘಾಟಿಸಿ ಮಾತಾಡುತ್ತಿದ್ದರು. ಅವರು ಸಂಘದ ಪದಾಧಿಕಾರಿಗಳು ಹಾಗೂ ಆರ್ಟ್ ಗ್ಯಾಲರಿಯ ಸ್ಥಾಪನೆಗೆ ಶ್ರಮಿಸಿದ ಎಲ್ಲರೂ ಅಭಿನಂದನಾರ್ಹರು ಎಂದರು. ಕಲಾವಿದ ಮಂಜುನಾಥ ಎಂ. ಕನ್ನೂರು ಅವರ ಕೃತಿಗಳನ್ನು ವೀಕ್ಷಿಸಿ ಪ್ರಶಂಶಿಸಿ ಉಪಯುಕ್ತ ಸಲಹೆ ನೀಡಿ ಶುಭ ಹಾರೈಸಿದರು.

ಕೇವಲ ಬಾಲ್ ಪಾಯಿಂಟ್ ಪೆನ್ನಿನಿಂದ ರಚಿಸಿದ ಈ



ಕಲಾಕೃತಿಗಳು ವಿಭಿನ್ನವಾಗಿದ್ದು ವೀಕ್ಷಕರನ್ನು ಆಕರ್ಷಿಸಿದವು. ಸಂಘದ ಅಧ್ಯಕ್ಷ ಶ್ರೀ ವಸಂತ ಶೆಟ್ಟಿ ಬೆಳ್ಳಾರೆ ಅವರು ಮಾತನಾಡಿ ಕಲಾವಿದ ಮಂಜುನಾಥ ಕನ್ನೂರು ಅವರು ಇಲ್ಲಿಗೆ ಆಗಮಿಸಿ ತಮ್ಮ ಕಲಾಕೃತಿಗಳ ಪ್ರದರ್ಶನ ಏರ್ಪಡಿಸಿರುವುದು ಸಂತೋಷವಾಗಿದೆ. ಚಿತ್ರಕಲಾವಿದರಿಗೆ ಪ್ರೋತ್ಸಾಹ ನೀಡಲು ಸಂಘವು ಮುಂದಿನ ದಿನಗಳಲ್ಲಿ ಆರ್ಟ್ ಗ್ಯಾಲರಿಯನ್ನು ಇನ್ನಷ್ಟು ಸುಸಜ್ಜಿತಗೊಳಿಸುವ ಭರವಸೆ ನೀಡಿದರು. ಕಲಾವಿದ ಮಂಜುನಾಥ ಕನ್ನೂರು ಅವರ ಕೀರ್ತಿ ದೇಶದಾದ್ಯಂತ ಪಸರಿಸಲಿ ಎಂದು ಶುಭ ಹಾರೈಸಿದರು. ಕಾರ್ಯಕ್ರಮದಲ್ಲಿ ದೆಹಲಿಯ ಕಲಾವಿದ ಸುಧೀರ್ ಫಡ್ನೀಸ್ ಅವರು ಮುಖ್ಯ ಅತಿಥಿಗಳಾಗಿ ಆಗಮಿಸಿದ್ದರು. ಉದ್ಘಾಟನಾ ಸಮಾರಂಭದಲ್ಲಿ ಸಂಘದ ಕಾರ್ಯಕಾರಿ ಸಮಿತಿಯ ಪದಾಧಿಕಾರಿಗಳು ಮತ್ತು ಸದಸ್ಯರುಗಳು ಹಾಜರಿದ್ದರು. ಅ

***ಚೆನ್ನು ಎಸ್. ಮಠದ***

# ಎಂ.ವಿ. ನಾರಾಯಣ ರಾವ್

## ಅವರಿಗೆ ದೆಹಲಿ ಕರ್ನಾಟಕ ಸಂಘದಿಂದ

# ಕನ್ನಡ ಭಾರತಿ ಪ್ರಶಸ್ತಿ

ದೆಹಲಿ ಕರ್ನಾಟಕ ಸಂಘವು ಈ ವರ್ಷದಿಂದ ದೆಹಲಿಯ ಕನ್ನಡ ರಂಗಭೂಮಿಯಲ್ಲಿ 60–70ರ ದಶಕದಲ್ಲಿ ಕ್ರಿಯಾಶೀಲವಾಗಿದ್ದ ಕನ್ನಡ ಭಾರತಿಯ ಹೆಸರಿನಲ್ಲಿ ಕನ್ನಡ ರಂಗಭೂಮಿಯಲ್ಲಿ ವಿಶೇಷ ಸಾಧನೆ ಮಾಡಿದವರಿಗೆ ನೀಡಲಿರುವ ಮೊದಲ ಪ್ರಶಸ್ತಿಯನ್ನು ಕನ್ನಡ ಭಾರತಿಯ ಯಶಸ್ಸಿಗೆ ವಿಶೇಷ ಸೇವೆ ಸಲ್ಲಿಸಿರುವ ಶ್ರೀ ಎಂ.ವಿ. ನಾರಾಯಣ ರಾವ್ ಅವರಿಗೆ ನೀಡಲಿದೆ. ಈ ಪ್ರಶಸ್ತಿ ರೂಪಾಯಿ 50,000/– ನಗದು ಮತ್ತು ಫಲಕವನ್ನೊಳಗೊಂಡು ಪ್ರಶಸ್ತಿ ವಿಜೇತರಿಗೆ ವೆಚ್ಚವನ್ನು ಕೂಡ ನೀಡಲಿದೆ.


ಕನ್ನಡ ಭಾರತಿ ಸಂಸ್ಥೆಯು ದೆಹಲಿಯ ಕನ್ನಡ ರಂಗಭೂಮಿಯ ಚಟುವಟಿಕೆಯಲ್ಲಿ ಕಳೆದ ಶತಮಾನದ 60ರ ದಶಕದಲ್ಲಿ ಅತ್ಯಂತ ಕ್ರಿಯಾಶೀಲವಾಗಿತ್ತು. ದಿ. ಬಿ.ವಿ. ಕಾರಂತ, ಎಂ.ಎಸ್. ಸತ್ಯು, ದಿ.ಯು. ಪ್ರಭಾಕರ ರಾವ್ ಮುಂತಾದ ರಂಗಭೂಮಿಯ ದಿಗ್ಗಜರು ನಾಟಕಗಳನ್ನು ನಿರ್ದೇಶಿಸಿದರೆ, ದಿ. ಜ್ಯೋತ್ಸ್ನಾರಾವ್, ಎಚ್.ಎಸ್. ಕುಲಕರ್ಣಿ, ಭೀಮರಾವ್ ಮುರಗೋಡ ಮೊದಲಾದವರು ನಾಟಕಗಳಲ್ಲಿ ಅಭಿನಯಿಸಿದ್ದರು.

***ಎಂ.ವಿ. ನಾರಾಯಣ ರಾವ್***

ಕನ್ನಡ ಮಾತೃ ಭಾಷೆಯ ಎಂ.ವಿ. ನಾರಾಯಣ ರಾವ್ ಅವರು ತಮಿಳು, ತೆಲುಗು, ಹಿಂದಿ ಭಾಷೆಗಳಲ್ಲಿ ಕೂಡಾ ಪ್ರವೀಣತೆಯನ್ನು ಪಡೆದಿದ್ದರು. 84 ವಯಸ್ಸಿನ ಎಂ.ವಿ. ನಾರಾಯಣ ರಾವ್ ಅವರು ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಎಂ.ಎ. (ಇಂಗ್ಲಿಷ್), ಎಂ.ಎ. (ಸಂಸ್ಕೃತ), ದೆಹಲಿ ವಿಶ್ವವಿದ್ಯಾನಿಲಯದಲ್ಲಿ ಭಾಷಾಧ್ಯಯನದಲ್ಲಿ ಡಿಪ್ಲೋಮಾ ವಿದ್ಯಾಭ್ಯಾಸವನ್ನು ಪಡೆದಿದ್ದರು.

ಉಡುಪಿ ಎಂ.ಜಿ.ಎಂ. ಕಾಲೇಜಿನಲ್ಲಿ ಮತ್ತು ಲಯೋಲಾ ಕಾಲೇಜಿನಲ್ಲಿ ಐದು ವರ್ಷ ಕಾಲ ಇಂಗ್ಲಿಷ್ ಅಧ್ಯಾಪಕರಾಗಿದ್ದ ಅವರು 1957ರ ಜುಲೈನಲ್ಲಿ ದೆಹಲಿಯಲ್ಲಿ ಕೇಂದ್ರ ಸರಕಾರದ ವಾರ್ತಾ ಮತ್ತು ಪ್ರಸಾರ ಸಚಿವಾಲಯದಲ್ಲಿ ಸಬ್ ಎಡಿಟರ್ ಹುದ್ದೆಗೆ ನೇಮಕಗೊಂಡರು. ಅನಂತರ, ಅಸಿಸ್ಟೆಂಟ್ ಎಡಿಟರ್, ಅಸಿಸ್ಟೆಂಟ್–ಡೈರೆಕ್ಟರ್ (ಎಡಿಟಿಂಗ್), ಪಬ್ಲಿಸಿಟಿ ಚೀಫ್ ಆಗಿ ಕೇಂದ್ರ ಸರಕಾರದ ವಿವಿಧ ಸಚಿವಾಲಯಗಳಲ್ಲಿ ದುಡಿದು, 1984ರ ಜನವರಿಯಲ್ಲಿ ಹಸ್ತಶಿಲ್ಪ ವಿಭಾಗದಲ್ಲಿ ಸೀನಿಯರ್ ಡೈರೆಕ್ಟರಾಗಿ ನೇಮಕಗೊಂಡರು. 1991ರ ಫೆಬ್ರವರಿಯಲ್ಲಿ ವಾಸ್ತುಶಿಲ್ಪ ಇಲಾಖೆಯಲ್ಲಿ ಎಕ್ಸಿಕ್ಯೂಟಿವ್ ಡೈರೆಕ್ಟರ್ ಆಗಿ ವೃತ್ತಿ ಜೀವನದಿಂದ ನಿವೃತ್ತರಾದರು.

1957ರಲ್ಲಿ ದೆಹಲಿಗೆ ಬಂದ ಶ್ರೀ ಎಂ.ವಿ. ನಾರಾಯಣ ರಾವ್ ಅವರು 1960 ರಿಂದ 63ರವರೆಗೆ ದೆಹಲಿಯ 'ದಕ್ಷಿಣ ಭಾರತ ನಟಿ–ನಟ ಸಮಾಖ್ಯ'ದ ಜಂಟಿ ಕಾರ್ಯದರ್ಶಿಯಾಗಿ ಅನೇಕ ಕನ್ನಡ ಕಾರ್ಯಕ್ರಮ ಹಾಗೂ ನಾಟಕಗಳನ್ನು ನಡೆಸಿದ್ದಾರೆ. 'ವೀರಯೋಧ', 'ಆಷಾಢಭೂತಿ', 'ವೈದ್ಯನ ವ್ಯಾಧಿ' ನಾಟಕಗಳ ರಂಗಪ್ರಯೋಗ ಮಾಡಿ ಅದರಲ್ಲಿ ಪ್ರಮುಖ ಪಾತ್ರಗಳನ್ನು ನಿರ್ವಹಿಸಿದ್ದರು.



**'ಕನ್ನಡ–ಭಾರತಿ' ಸಂಸ್ಥೆಯ ಸ್ಥಾಪನೆಯಲ್ಲಿ ಸಹಭಾಗಿಯಾಗಿ ಅಂದಿನಿಂದ ಸ್ಥಾಪಕ–ಕಾರ್ಯದರ್ಶಿಯಾಗಿ ಕನ್ನಡಕ್ಕಾಗಿ, ಕನ್ನಡ ರಂಗಭೂಮಿಗಾಗಿ ದುಡಿದಿದ್ದಾರೆ. ಕನ್ನಡ ಭಾರತಿಯ ರಜತ ಮಹೋತ್ಸವವನ್ನು ಒಂದು ವರ್ಷ ಆಚರಿಸಿದ್ದಾರೆ**

1963ರಲ್ಲಿ ಪ್ರಭಾಕರ ರಾವ್, ಶಾ. ಬಾಲು ರಾವ್, ಎಂ.ಎಸ್. ಸತ್ಯು, ಬಿ.ವಿ. ಕಾರಂತ, ಡಿ. ರಮೇಶ್, ವಿ. ರಾಮಮೂರ್ತಿ ಇವರೆಲ್ಲರ ನೆರವಿನಿಂದ 'ಕನ್ನಡ–ಭಾರತಿ' ಸಂಸ್ಥೆಯ ಸ್ಥಾಪನೆಯಲ್ಲಿ ಸಹಭಾಗಿಯಾದರು. ಅಂದಿನಿಂದ ಇಂದಿನವರೆಗೂ ಸ್ಥಾಪಕ–ಕಾರ್ಯದರ್ಶಿಯಾಗಿ ಕನ್ನಡಕ್ಕಾಗಿ, ಕನ್ನಡ ರಂಗಭೂಮಿಗಾಗಿ ದುಡಿದಿದ್ದಾರೆ. ಕನ್ನಡ ಭಾರತಿಯ ರಜತ ಮಹೋತ್ಸವವನ್ನು ಒಂದು ವರ್ಷ ಪರ್ಯಂತ 1990ರಲ್ಲಿ ಯಶಸ್ವಿಯಾಗಿ ಆಚರಿಸಿದ್ದಾರೆ.

ಷೇಕ್ಸ್‌ಪಿಯರ್ ಮಹಾಕವಿಯ ನಾನೂರನೇ ಹುಟ್ಟುಹಬ್ಬದ ಆಚರಣೆ, 1964ರಲ್ಲಿ; ಡಿ.ವಿ.ಜಿ. ಅವರ ಕನ್ನಡ 'ಮ್ಯಾಕ್‌ಬೆತ್' ನಾಟಕದ ಪ್ರಯೋಗ; 'ಷೇಕ್ಸ್‌ಪಿಯರಿಗೆ ನಮಸ್ಕಾರ' ಗ್ರಂಥದ ಬಿಡುಗಡೆ, ಮತ್ತು ನಿರಂತರವಾಗಿ ಶ್ರೀರಂಗ, ಸಂಸ, ಕೈಲಾಸಂ, ಗಿರೀಶ್ ಕಾರ್ನಾಡ್, ಜಿ.ಬಿ. ಜೋಷಿ, ಆನಂದ ಮೊದಲಾದ ಹೆಸರಾಂತ ಕನ್ನಡ ನಾಟಕಕಾರ ನಾಟಕಗಳ ಪ್ರಯೋಗಗಳನ್ನು ಮಾಡಿದರು. ವಿಜಯ ತೆಂಡೂಲ್ಕರ್, ಲಲಿತ ಸೆಹಗಲ್, ಸಫ್ದರ್ ಹಶ್ಮಿ, ಮೋಹನ ರಾಕೇಶ್ ಮೊದಲಾದವರ ಹಿಂದಿ ನಾಟಕಗಳ ಕನ್ನಡ ರೂಪಾಂತರ ಮತ್ತು ಅವುಗಳ ರಂಗಪ್ರಯೋಗ; ಕನ್ನಡ ಕಾರ್ಯಕ್ರಮಗಳ ಜೊತೆಗೆ ದೆಹಲಿಯ ಇತರ ಭಾಷಾ ಪ್ರೇಮಿಗಳಿಗೂ ಉಪಯೋಗವಾಗುವಂತೆ ಕನ್ನಡ ನಾಟಕ ಹಾಗೂ ನಾಟಕಕಾರರ ಮೇಲೆ ಇಂಗ್ಲಿಷ್‌ನಲ್ಲಿ ಕಿರುಹೊತ್ತಿಗೆಗಳ ಪ್ರಕಟಣೆ ಕೂಡಾ ಮಾಡಿದ್ದಾರೆ. ನಾಟಕಗಳೇ ಅಲ್ಲದೆ ಕನ್ನಡ ಕಲಾವಿದರ ಕಲಾ ಪ್ರದರ್ಶನಗಳು, ಕನ್ನಡ ಸಂಗೀತಗಾರರ ಗಾಯನ ಕಾರ್ಯಕ್ರಮಗಳು, ಕನ್ನಡ ನೃತ್ಯ ಕಲಾವಿದೆಯರಿಂದ ನಾಟ್ಯಪ್ರದರ್ಶನಗಳು, ಛಾಯಾಚಿತ್ರ ಪ್ರದರ್ಶನಗಳನ್ನು ಏರ್ಪಡಿಸುವಲ್ಲಿಯೂ ಅವರು ಬಹಳಷ್ಟು ಶ್ರಮ ವಹಿಸಿದ್ದಾರೆ.

ಸ್ವತಃ ನಟನಾಗಿ ಅನೇಕ ನಾಟಕ ಹಾಗೂ ಚಲನಚಿತ್ರಗಳಲ್ಲಿ ಪಾತ್ರ ನಿರ್ವಹಣೆ, 'ಮ್ಯಾಕ್‌ಬೆತ್'ನಲ್ಲಿ,–ಮ್ಯಾಕ್‌ಬೆತನಾಗಿ, ಆಷಾಢಭೂತಿ'ಯಲ್ಲಿ–ಸುಬ್ಬಾಶಾಸ್ತ್ರಿಯಾಗಿ, 'ದಾರಿ ಯಾವುದಯ್ಯಾ ವೈಕುಂಠಕೆ' ಯಲ್ಲಿ– ನಾಟಕಕಾರನಾಗಿ, 'ತುಘಲಕ್ ನಲ್ಲಿ–ತುಘಲಕ್‌ನಾಗಿ, 'ವಿಜಯನಾರಸಿಂಹ'ದಲ್ಲಿ–ರಣಧೀರ ಕಂಠೀರವನಾಗಿ, 'ರಂಗ ಭಾರತ'ದಲ್ಲಿ–ಧರ್ಮರಾಯನಾಗಿ, 'ಬಂಡ್ವಾಳ್ವಿಲ್ಲದ ಬಡಾಯಿ'ಯಲ್ಲಿ–ಲಾಯರ್ ಅಹೋಬ್ಳು ಆಗಿ, 'ಯಯಾತಿ' ಯಲ್ಲಿ ಯಯಾತಿಯಾಗಿ, ಸರ್ವೇಶ್ವರ ಸಾಕ್ಸೇನ ಅವರ 'ಕುರಿ'ಯಲ್ಲಿ ನಟ–ಸೂತ್ರಧಾರನಾಗಿ, 'ನಾ.ಕ್ರ.ಸ. ಅವರ 'ನಹಿ ನಹಿ ರಕ್ಷತಿ'ಯಲ್ಲಿ ಪದ್ಮಪಾದನಾಗಿ ಪ್ರಮುಖ ಪಾತ್ರ ನಿರ್ವಹಿಸಿದ್ದಾರೆ.

ಐದು ಚಲನಚಿತ್ರಗಳಲಿ ನಟಿಸಿರುವ ಅವರು ಹಂಸಗೀತೆ'ಯಲ್ಲಿ ಸೋದರಮಾವ ಅನಂತಯ್ಯನಾಗಿ, 'ಬರ'ದಲ್ಲಿ ಪೋಲಿಸ್ ಸೂಪರಿಂಟೆಂಡೆಂಟ್ ಆಗಿ, ಅದರ ಹಿಂದೀ ಅವತರಣಿಕೆಯಾದ 'ಸುಖಾ'ದಲ್ಲಿ ಪೋಲಿಸ್ ಸೂಪರಿಂಟೆಂಡೆಂಟ್ ಆಗಿ, ಸಂಸ್ಕೃತ ಚಿತ್ರ 'ಆದಿ ಶಂಕರಾಚಾರ್ಯ'ದಲ್ಲಿ ಮಂಡನ ಮಿಶ್ರ–ಸುರೇಶ್ವರಾಚಾರ್ಯನಾಗಿ, ಪ್ರಥಮ ಉಷಾಕಿರಣ'ದಲ್ಲಿ ನಾಯಕನ ತಂದೆಯಾಗಿ ಪಾತ್ರ ನಿರ್ವಹಣೆ. ಅಲ್ಲದೆ 'ಕಾಯರ್' ಹಿಂದಿ ಟೆಲಿ ಸೀರಿಯಲ್‌ನಲ್ಲಿ 'ಪರಮು ಆಶನ್' ಆಗಿ ಪಾತ್ರ ನಿರ್ವಹಣೆ ಮಾಡಿದ್ದಾರೆ.

ಅವರ ಪತ್ನಿ ಲೀಲಾರಾವ್ ಅವರೂ ಅವರ ಜತೆ ತುಘಲಕ್‌ನಲ್ಲಿ, ಯಯಾತಿಯಲ್ಲಿ ಚಿತ್ರಲೇಖೆಯಾಗಿ, 'ಆದಿ ಶಂಕರಾಚಾರ್ಯ' ಚಲನಚಿತ್ರದಲ್ಲಿ ಉಭಯ ಭಾರತಿಯಾಗಿ ಪಾತ್ರ ನಿರ್ವಹಿಸಿದ್ದಾರೆ. ವೃತ್ತಿಯಿಂದ ನಿವೃತ್ತಿಯಾದ ನಂತರ ಅವರು ಒಂಭತ್ತು ತಿಂಗಳು ಅಮೆರಿಕಾ, ಇಂಗ್ಲೆಂಡ್ ದೇಶಗಳಲ್ಲಿ ಸುತ್ತಾಡಿ ಅಲ್ಲಿಯ ಜನಜೀವನ, ಸಂಸ್ಕೃತಿ ಹಾಗು ಅಲ್ಲೆಲ್ಲಾ ನೆಲಸಿರುವ ಕನ್ನಡಿಗರ ಕನ್ನಡ ಚಟುವಟಿಕೆಗಳನ್ನು ಅಧ್ಯಯನ ಮಾಡಿ ಬಂದಿದ್ದಾರೆ. ಕನ್ನಡದಲ್ಲಿ ಮತ್ತು ಇಂಗ್ಲಿಷ್‌ನಲ್ಲಿ ಅವರು ಲೇಖನಗಳನ್ನು ಕೂಡಾ ಪತ್ರಿಕೆಗಳಿಗೆ ಬರೆಯುತ್ತಿದ್ದರು. ಇಂಗ್ಲಿಷ್ ಪುಸ್ತಕಗಳನ್ನು ಕನ್ನಡಕ್ಕೆ ರೂಪಾಂತರಿಸುವ ಹವ್ಯಾಸವೂ ಅವರಿಗಿದೆ. ಅ

***ಅಭಿಮತ ವರದಿ***









# ಗೋಕರ್ಣ ಮಂಡಳದ ಸದಸ್ಯರಿಂದ
# ಸಾಂಸ್ಕೃತಿಕ ಕಾರ್ಯಕ್ರಮ

ದೆಹಲಿಯ ಗೋಕರ್ಣ ಮಂಡಳದ ಸದಸ್ಯರು ದೆಹಲಿ ಕರ್ನಾಟಕ ಸಂಘದ 2014 –15ನೇ ಸಾಲಿನ ವಿದ್ಯಾರ್ಥಿ ವೇತನ ವಿತರಣಾ ಸಮಾರಂಭದ ಸಂದರ್ಭದಲ್ಲಿ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಸಂಘದ ಸಭಾಂಗಣದಲ್ಲಿ ಇದೇ ಮಾರ್ಚ್ 22ರಂದು ಪ್ರಸ್ತುತ ಪಡಿಸಿದರು.

ಗೋಕರ್ಣ ಮಂಡಳದ ಅಧ್ಯಕ್ಷರಾದ ಶ್ರೀ ನಾರಾಯಣ ಭಟ್ ಅವರಿಂದ ಮಂಕುತಿಮ್ಮನ ಕಗ್ಗ ವಾಚನ ಕಾರ್ಯಕ್ರಮ ನಡೆಯಿತು.

ಶ್ರೀಮತಿ ವಸಂತಿ ವಿ. ಭಟ್ ಅವರಿಂದ ವಯೊಲಿನ್ ವಾದನ ನಡೆಯಿತು. ಶ್ರೀ ಭಾರ್ಗವ ಭಟ್ ಅವರಿಂದ ಹಿಂದೂಸ್ತಾನಿ ಕೊಳಲು ವಾದನ ನಡೆಯಿತು.

ಕು. ನವ್ಯಶ್ರೀ ಭಟ್ ಹಾಗೂ ಶ್ರೀಮತಿ ಶಾಲಿನಿ ಪ್ರಶಾಂತ್ ಅವರು ಭರತನಾಟ್ಯವನ್ನು ಪ್ರದರ್ಶಿಸಿದರು. ಕು. ರಂಜಿತ ಹೆಗ್ಡೆ ಹಾಗೂ ಕು. ನಿಕಿತ ಹೆಗ್ಡೆ ಅವರು ದಶಭದ್ರ ಹಾಗೂ ದಶಾವತಾರ ಒಡಿಸ್ಸಿ ನೃತ್ಯ ಮಾಡಿದರು.

ಶ್ರೀಮತಿ ಪೃಥ್ವಿ ಕಾರಿಂಜೆ ಹಾಗೂ ಶ್ರೀ ಸಂತೋಷ್ ಕುಮಾರ್ ಉಪಾಧ್ಯಾಯ ಅವರು ಭಾವಗೀತೆಗಳನ್ನು ಹಾಡಿದರು. ಕು. ಅನಘಾ ಉಪಾಧ್ಯಾಯ ಅವರಿಂದ ಸಂಕ್ಷಿಪ್ತ ರಾಮಲೀಲಾ ಪದ, ಮಾಸ್ಟರ್ ಪ್ರಣವ್ ಹೆಗ್ಡೆ ಅವರಿಂದ ಜಯ ಜನಾರ್ಧನ ಸಂಸ್ಕೃತ ಭಜನೆ ಮತ್ತು ಶ್ರೀಮತಿ ವಿದ್ಯಾ ಎನ್. ಭಟ್ ಅವರಿಂದ ಚಲನಚಿತ್ರ ಗೀತೆಗಳ ಕಾರ್ಯಕ್ರಮ ನಡೆಯಿತು. ಇವರೆಲ್ಲರಿಗೂ ತಬಲಾದಲ್ಲಿ ಶ್ರೀ ಶ್ರೀನಿಧಿ ಹೆಗ್ಡೆ ಸಹಕರಿಸಿದರು.

ನಂತರ ಯಕ್ಷಸಿರಿ ಬೆಂಗಳೂರು ಮಹಿಳಾ ಕಲಾವಿದರಿಂದ ಮಾಗದ ವಧೆ ಯಕ್ಷಗಾನ ಕಾರ್ಯಕ್ರಮ ನಡೆಯಿತು. ಅ

***ಪೃಥ್ವಿ ಕಾರಿಂಜೆ***















# ಸಂಘದಲ್ಲಿ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ

ಇಂದಿನ ಸಮಾಜದಲ್ಲಿ ಮಹಿಳೆಯರ ಮೇಲಿನ ದೌರ್ಜನ್ಯಗಳು ಹೆಚ್ಚುತ್ತಿವೆ. ಇಂದು ಮಹಿಳೆಯರನ್ನು ಹಿಂದೆಂದಿಗಿಂತಲೂ ಹೆಚ್ಚು ಭೋಗದ ವಸ್ತುವಾಗಿ ಪರಿಗಣಿಸಿದಂತೆ ಕಾಣುತ್ತಿದೆ ಎಂದು ಕಂಟ್ರೋಲರ್ ಜನರಲ್ ಆಫ್ ಇಂಡಿಯಾದಲ್ಲಿ ಪ್ರಿನ್ಸಿಪಾಲ್ ಡೈರೆಕ್ಟರ್ ಆಗಿರುವ ಶ್ರೀಮತಿ ಶಾರದಾ ಸುಬ್ರಹ್ಮಣ್ಯಂ ಅವರು ಹೇಳಿದರು.

ಅವರು ದೆಹಲಿ ಕರ್ನಾಟಕ ಸಂಘದಲ್ಲಿ ಇದೇ ಮಾರ್ಚ್ 8ರಂದು ಅಂತಾರಾಷ್ಟ್ರಿಯ ಮಹಿಳಾ ದಿನಾಚರಣೆಯ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತಾಡುತ್ತಿದ್ದರು. ಮಹಿಳಾ ದಿನಾಚರಣೆ ಎನ್ನುವುದು ಮಹಿಳೆಯರು ಮಾತ್ರ ಆಚರಿಸುವ ದಿನವಲ್ಲ. ಇದನ್ನು ಗಂಡಸರೂ ಆಚರಿಸಬೇಕು. ಆಗ ಮಾತ್ರ ಮಹಿಳೆಯರಿಗೆ ವರ್ಷದಲ್ಲಿ ಒಂದು ದಿನವಲ್ಲ, ವರ್ಷ ಪೂರ್ತಿ ಮಹಿಳಾದಿನವನ್ನಾಗಿ ಆಚರಿಸಲಾದೀತು. ಪ್ರತಿ ಮಗುವೂ ಹುಟ್ಟಿದ ಕನಿಷ್ಟ ಐದು ವರ್ಷ ಒಬ್ಬಳು ಮಹಿಳೆ ಅರ್ಥಾತ್ ತನ್ನ ತಾಯಿಯ ಮೇಲೆ ಅವಲಂಬಿತವಾಗಿರುತ್ತದೆ. ಮಹಿಳೆಯರನ್ನು, ವಿಶೇಷವಾಗಿ ಮನೆಯಲ್ಲೇ ಗೃಹಿಣಿಯಾಗಿರುವ ಮಹಿಳೆಯರನ್ನು ಗಂಡಸರು ಬಹಳ ಅನಾದರದಿಂದ ನೋಡುತ್ತಾರೆ. ಅದು ಆಗಬಾರದು. ಮಹಿಳೆ ಇಂದು ಯಾವುದೇ ಕ್ಷೇತ್ರದಲ್ಲಿ ದುಡಿಯಲು ಸಮರ್ಥಳಾಗಿದ್ದಾಳೆ ಎಂದು ಅವರು ಹೇಳಿದರು.

ಎಲ್ಲ ಕ್ಷೇತ್ರಗಳಲ್ಲಿಯೂ ಮಹಿಳೆಯ ಜಾಣತನ, ಶಕ್ತಿ, ಸಾಮರ್ಥ್ಯ, ಬುದ್ಧಿವಂತಿಕೆಗಳು ಮುಂಚೂಣಿಗೆ ಬಾರದಂತೆ ಅವರ ಜ್ಞಾನವನ್ನು ತಿರಸ್ಕರಿಸುವಂತಹ ಪುರುಷ ರಾಜಕಾರಣವು ಇತ್ತೀಚಿನ ದಿನಗಳಲ್ಲಿ ಕ್ರಿಯಾಶೀಲವಾಗಿದೆ. ನಾಯಕತ್ವ ಹೊಂದುವ ಜಾಗದಲ್ಲಿ ಮಹಿಳೆಯರ ಸ್ಥಾನವಿಲ್ಲ, ಅದರಲ್ಲೂ ಹಿಂದುಳಿದ ಅಲ್ಪ ಸಂಖ್ಯಾತ ಮಹಿಳೆಯರಿಗಂತೂ ಇಲ್ಲವೇ ಇಲ್ಲವೇನೋ ಎಂಬ ವಾತಾವರಣ ಉಂಟು ಎಂದು ಅವರು ವಿಷಾದಿಸಿದರು. ಸಮಾಜದಲ್ಲಿ ಸಾಮಾಜಿಕ ಚಟುವಟಿಕೆಯಲ್ಲಿ ಕೆಲಸ ಮಾಡುವಂತಹ ಮಹಿಳೆಯರನ್ನು ಹೇಗಾದರೂ ಮಾಡಿ ಅವರು ಹಿಂದೆ ಸರಿಯುವಂತೆ ಮಾಡಲಾಗುತ್ತಿದೆ. ನಮ್ಮ ದೇಶದಲ್ಲಿ ಎದ್ದು ಕಾಣುತ್ತಿರುವ ಭೋಗ ಮಾದರಿಗಳು ಸಾಮಾನ್ಯರನ್ನು ವಿಕ್ಷಿಪ್ತಗೊಳಿಸುವಂತೆ ಸಾಮಾನ್ಯ ಜನರಿಗೆ ಮಹಿಳೆಯರ ಮೇಲಿನ ಅತ್ಯಾಚಾರ ಒಂದು ಉದಾಹರಣೆಯಾಗಿದೆ ಎಂದು ಅವರು ಹೇಳಿದರು.

ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷರಾದ ವಸಂತ ಶೆಟ್ಟಿ ಬೆಳ್ಳಾರೆ ಅವರು ಕಾರ್ಯಕ್ರಮವನ್ನು ಉದ್ದೇಶಿಸಿ ಮಾತನಾಡಿದರು. ಈ ಸಂದರ್ಭದಲ್ಲಿ ರಾಧಿಕಾ ಶೆಟ್ಟಿ ಅವರಿಂದ ನೃತ್ಯಸಂಧ್ಯಾ ಕಾರ್ಯಕ್ರಮವು ನಡೆಯಿತು. ಸಂಘದ ಸದಸ್ಯೆಯರಿಂದ ಸಾಂಸ್ಕೃತಿಕ ಕಾರ್ಯಕ್ರಮಗಳು ಜರುಗಿದವು. ಕಾರ್ಯಕಾರಿ ಸಮಿತಿಯ ಸದಸ್ಯೆ ಶ್ರೀಮತಿ ಪೂಜಾ ಪಿ. ರಾವ್ ಸ್ವಾಗತಿಸಿದರು. ಉಪಾಧ್ಯಕ್ಷೆ ಶ್ರೀಮತಿ ಆಶಾಲತ ಎಂ. ಅವರು ವಂದಿಸಿದರು. ಅ

*ಅಭಿಮತ ವರದಿ*

ದೆಹಲಿ ಕರ್ನಾಟಕ ಸಂಘವು ಅಂತರರಾಷ್ಟ್ರಿಯ ಮಹಿಳಾ ದಿನಾಚರಣೆಯ ಅಂಗವಾಗಿ ದೆಹಲಿಯ ಕನ್ನಡದ ಮಹಿಳಾ ಚಿತ್ರಕಲಾವಿದರಿಂದ ಚಿತ್ರಕಲಾ ಪ್ರದರ್ಶನವನ್ನು ಮಾರ್ಚ್ 8ರಂದು ಏರ್ಪಡಿಸಿತ್ತು.

ಕಾರ್ಯಕ್ರಮಕ್ಕೆ ಮುಖ್ಯ ಅತಿಥಿಯಾಗಿ ಆಗಮಿಸಿದ ಶ್ರೀಮತಿ ಶಾರದಾ ಸುಬ್ರಹ್ಮಣ್ಯಂ ಅವರು ದೀಪ ಬೆಳಗಿಸಿ ಪ್ರದರ್ಶನವನ್ನು ಉದ್ಘಾಟಿಸಿದರು. ನಂತರ ಚಿತ್ರಕಲಾವಿದರೊಂದಿಗೆ ವಿಚಾರ ವಿನಿಮಯ ಮಾಡುತ್ತಾ ಚಿತ್ರಕಲಾ ಪ್ರದರ್ಶನವನ್ನು ವೀಕ್ಷಿಸಿದರು.

ಈ ಪ್ರದರ್ಶನದಲ್ಲಿ ಅನು ನಾಯಕ್, ಗೀತಾ ರಾಮಶೇಷ, ಶಾಲನ್ ಮುರಗೋಡ, ಜ್ಯೋತಿ ಪೊದ್ದಾರ್, ಜಮುನಾ ಸಿ. ಮಠದ, ಸುಮಿತಾ ಮುರಗೋಡ, ಗೌರಿ ಹುರಿಕಡ್ಲಿ ಮತ್ತು ನಂದಿನಿ ಮಠದ ಇವರ ಕಲಾಕೃತಿಗಳು ಪ್ರದರ್ಶನಗೊಂಡವು. ಕಲಾವಿದ ಸುಧೀರ್ ಫಡ್ನೀಸ್ ಅವರು ಸಹಕರಿಸಿದರು.





















# ಸಂಘದಲ್ಲಿ ತಿಂಗಳ ನಾಟಕ
## ಅಜ್ಜಿ ಆಸ್ತಿ



ಮಾರ್ಚ್ 8 ಅಂತರಾಷ್ಟ್ರೀಯ ಮಹಿಳಾ ದಿನವಾಗಿತ್ತು. ಈ ತಿಂಗಳು ದೆಹಲಿ ಕರ್ನಾಟಕ ಸಂಘದಲ್ಲಿ ಮಹಿಳೆಯರಿಂದಲೇ ಕೆಲವೊಂದು ಪ್ರಮುಖ ಕಾರ್ಯಕ್ರಮಗಳು ನಡೆದವು. ಸಂಘವು ನಡೆಸುವ ತಿಂಗಳ ನಾಟಕವನ್ನೂ ಪ್ರಸ್ತುತ ಪಡಿಸಿದುದು ಇಲ್ಲಿನ ಮಹಿಳಾ ಸಂಘಟನೆಯೇ. ಸ್ನೇಹಾ ದೆಹಲಿ ಕನ್ನಡ ಲೇಡಿಸ್ ಅಸೋಸಿಯೇಶನ್‌ನ ಸದಸ್ಯೆಯರು ದಾಶರಥಿ ದೀಕ್ಷಿತ್ ಅವರ ಅಜ್ಜಿ ಆಸ್ತಿ ನಾಟಕವನ್ನು ಮಾರ್ಚ್ 28ರಂದು ಸಂಘದ ಸಭಾಂಗಣದಲ್ಲಿ ಪ್ರದರ್ಶಿಸಿದರು.

ನಾಟಕದ ಒಟ್ಟು ಕಥಾವಸ್ತು ಒಂದೆಡೆ ಅತಿ ಆಸೆ ಗತಿಗೇಡು. ಇನ್ನೊಂದೆಡೆ ಹಿರಿಯರನ್ನು ಪೂಜಿಸಿ ದೇವರಂತೆ ಕಾಣುವ ಹಿಂದಿನ ಸಂದರ್ಭವಾದರೆ ಈಗಿನ ದಿನಗಳಲ್ಲಿ ಹಿರಿಯರ ಆಸ್ತಿ ಸಿಗುವವರೆಗೆ ಅವರನ್ನು ಚೆನ್ನಾಗಿ ನೋಡಿಕೊಳ್ಳುವಂತಹ ನಾಟಕೀಯ ವ್ಯವಸ್ಥೆ.

ಹಿರಿಯರ ಸೇವೆ ದೇವರ ಸೇವೆ ಎಂಬುದಾಗಿ ಭಾವಿಸುತ್ತ, ಅದಕ್ಕಾಗಿಯೇ ಜೀವನದಲ್ಲಿ ಏನೆಲ್ಲ ಕಷ್ಟಕಾರ್ಪಣ್ಯಗಳು ಎದುರಾದರೂ ಮನ ಕುಗ್ಗದೆ ಸಾಲ ಸೋಲ ಮಾಡಿಯಾದರೂ ತಮ್ಮ ಮನೆಯ ಹಿರಿಯರನ್ನು ಅವರಿರುವ ತನಕ ಸಂತೋಷದಿಂದ ನೋಡಿಕೊಳ್ಳಬೇಕೆಂದು ಸೇವೆ ಮಾಡುತ್ತಿದ್ದ ಕಾಲವೊಂದಿತ್ತು. ಆದರೆ ಬರಬರುತ್ತ ಹಿರಿಯರ ಸೇವೆಗಿಂತ ಅವರು ಉಳಿಸಿಟ್ಟಿರುವ ಆಸ್ತಿಯನ್ನೇ ಗುರಿಯನ್ನಾಗಿಸಿಕೊಂಡು ಸೇವೆ ಮಾಡುವ ರೀತಿಯೇ ಬೇರೆ. ಹೀಗೆ ಬದುಕುವ ಜನರು ಸಹ ಇರುತ್ತಾರೆ ಎಂಬುದನ್ನು ದಾಶರಥೀ ದೀಕ್ಷಿತ್ ಅವರು ನಾಟಕದಲ್ಲಿ ತಿಳಿಸಲು ಪ್ರಯತ್ನಿಸಿದ್ದಾರೆ.


ಅಜ್ಜಿ ಆಸ್ತಿಯ ನಾಟಕದ ನಿಜವಾದ 'ಆಸ್ತಿ'ಯಾಗಿ ಕಂಡು ಬಂದವರು ದೆಹಲಿಯ ಹಿರಿಯ ಕನ್ನಡತಿ ಡಾ. ಅಹಲ್ಯಾ ಚಿಂತಾಮಣಿ. ಅವರು ತಮ್ಮ ಅತ್ಯುತ್ತಮ ನಟನೆಯನ್ನು ನೀಡಿ ಅಜ್ಜಿ ಪಾತ್ರಕ್ಕೆ ನೈಜತೆಯನ್ನು ತಂದುಕೊಟ್ಟರು.

ದೆಹಲಿಯ ರಂಗ ಚಟುವಟಿಕೆಯಲ್ಲಿ ಸಕ್ರಿಯರಾಗಿರುವ ಆಶಾ ಶ್ಯಾಮಸುಂದರ್ ಕೋದಂಡನಾಗಿ, ಎಸ್.ಸಿ. ಹೇಮಲತ ಅವರು ಚಿದಂಬರ ಭಾಗವತ್ ಮತ್ತು ಸಿ.ಐ.ಡಿ. ಅಧಿಕಾರಿಯಾಗಿ, ಹಾಗೂ ವೃಂದಾ ಚಿಕ್ಕೆರೂರು ಅವರು ನಂಜುಂಡನಾಗಿ ಮಹಿಳೆಯರೂ ಪುರುಷ ಪಾತ್ರವನ್ನು ಯಶಸ್ವಿಯಾಗಿ ನಿರ್ವಹಿಸಬಲ್ಲರು ಎಂಬುದನ್ನು ತೋರಿಸಿಕೊಟ್ಟರು.

ರಾಧಾ ಕೌಜಲಗಿ ಕಾಮಾಕ್ಷಿಯಾಗಿ, ಸವಿತಾ ನೆಲ್ಲಿ ಅವರು ಡಾಕ್ಟರ್‌ರಾಗಿ, ಸರೋಜ ಮಾಧವ ಅವರು ಗೌರಿಯಾಗಿ ಅವರವರ ಪಾತ್ರಕ್ಕೆ ಜೀವ ತುಂಬುವಲ್ಲಿ ಯಶಸ್ವಿಯಾದರು.

ನಾಟಕದ ನಟನೆ, ಪರಿಕರ ಜೋಡಣೆ ಎಲ್ಲವನ್ನೂ ಮಹಿಳೆಯರು ಮಾಡಿದರಾದರೂ ನಾಟಕ ನೋಡಿದ ನಂತರ ಪ್ರೇಕ್ಷಕರು ಒಳ್ಳೆಯ ನಾಟಕ ಎನ್ನುವಂತೆ ನಾಟಕವನ್ನು ನಿರ್ದೇಶಿಸಿದವರು ರಂಗಭೂಮಿಯಲ್ಲಿ ಪಳಗಿದ ನಿರ್ದೇಶಕ ಟಿ.ಎಂ. ಮೈಲಾರಪ್ಪ ಅವರು.


*ಅಭಿಮತ ವರದಿ*





# ಉದಯಂ ಶ್ರೀನಿವಾಸನ್ ಅವರಿಗೆ ತಮಿಳ್ ಸಂಘಂನಲ್ಲಿ ಅಭಿನಂದನೆ

ದೆಹಲಿ ಕರ್ನಾಟಕ ಸಂಘದ ಹಿರಿಯ ಸದಸ್ಯರಾದ ಉದಯಂ ಶ್ರೀನಿವಾಸನ್ ಅವರನ್ನು ಎಪ್ರಿಲ್ 4ರಂದು ದೆಹಲಿ ತಮಿಳ್ ಸಂಘಂನಲ್ಲಿ ಆತ್ಮೀಯವಾಗಿ ಅಭಿನಂದಿಸಲಾಯಿತು. ಶ್ರೀ ಶ್ರೀನಿವಾಸನ್ ಅವರು ತಮಿಳಿನ ಪ್ರಾಚೀನ ಕೃತಿ ತಿರುಕ್ಕುರಳ್ ಅನ್ನು ಅತ್ಯಂತ ಸಮರ್ಥವಾಗಿ ಕನ್ನಡಕ್ಕೆ ಅನುವಾದಿಸಿದ ಮಹಾ ಕಾರ್ಯವನ್ನು ಗಮನಿಸಿ ಈ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಪ್ರೊ. ರಾಮಮೂರ್ತಂ ಅವರು ಕನ್ನಡ ಮತ್ತು ತಮಿಳಿನ ನಡುವೆ ಇನ್ನಷ್ಟು ಬಾಂಧವ್ಯ ಬೆಳೆಯಬೇಕಾದ ಅಗತ್ಯದ ಕುರಿತು ಮಾತಾಡಿ ಶ್ರೀನಿವಾಸರಿಗೆ ಶುಭ ಹಾರೈಸಿದರು. ಜವಾಹರಲಾಲ ನೆಹರೂ ವಿಶ್ವ ವಿದ್ಯಾಲಯದ ಸಂಶೋಧನಾ ವಿದ್ಯಾರ್ಥಿ ಕುಮಾರಿ ತಿಲಕವತಿ ಅವರು ತಿರುಕ್ಕುರಳ್‌ನ ಕನ್ನಡ ಅನುವಾದಗಳ ಬಗ್ಗೆ ಮಾಹಿತಿ ನೀಡಿ, ಶ್ರೀನಿವಾಸನ್ ಅವರ ಅನುವಾದವು ಇವುಗಳಿಗಿಂತ ಹೇಗೆ ಭಿನ್ನ ಎಂಬುದನ್ನು ಸಂಕ್ಷಿಪ್ತವಾಗಿ ವಿವರಿಸಿದರು. ಜೆ.ಎನ್.ಯು.ವಿನ ತಮಿಳು ಅಧ್ಯಯನ ಪೀಠದ ಮುಖ್ಯಸ್ಥರಾದ ಪ್ರೊ. ದಾಮೋದರನ್ ಅವರು ತಿರುಕ್ಕುರುಳ್ ಕೃತಿಯ ಮಹತ್ವದ ಕುರಿತು ಬೆಳಕು ಚೆಲ್ಲಿದರು. ಈ ಸಂದರ್ಭದಲ್ಲಿ ಮಾತಾಡಿದ ಲೇಖಕ ಡಾ. ಪುರುಷೋತ್ತಮ ಬಿಳಿಮಲೆಯವರು ಇಂಥ ಅನುವಾದಗಳು ಭಾಷೆಗೆ ಮಾತ್ರ ಸೀಮಿತವಾಗಿರದೆ, ಯಕ್ಷಗಾನ,



ತೆರುಕೂತ್ತುಗಳಂಥ ಪ್ರದರ್ಶನ ಕಲೆಗಳಿಗೂ ವಿಸ್ತರಿಸಿಕೊಳ್ಳಬೇಕೆಂದು ಹೇಳಿದರು. ಕನ್ನಡ ಮತ್ತು ತಮಿಳು ಭಾಷೆಯ ಮೇಲೆ ಸಮಾನ ಹಿಡಿತ ಸಾಧಿಸಿರುವ ಅನುವಾದಕ ಉದಯಂ ಶ್ರೀನಿವಾಸ ಅವರು ಅನುವಾದದ ಮುಂದಿರುವ ಕಷ್ಟಗಳನ್ನು ವಿವರಿಸಿ, ಸಹಕರಿಸಿದ ಎಲ್ಲರಿಗೂ ಕೃತಜ್ಞತೆಗಳನ್ನು ಅರ್ಪಿಸಿದರು.

*ಅಭಿಮತ ವರದಿ*



# ಕನ್ನಡ ಅನ್ನದ ಪ್ರಶ್ನೆಯಾಗದೇ ಇದ್ದಾಗ ಏನಾಗುತ್ತದೆ?

ದಕ್ಷಿಣ ಭಾರತದ ಇತರ ಭಾಷೆಗಳ ಜನರಿಗೆ ಹೋಲಿಸಿದರೆ, ಕನ್ನಡಿಗರ ವಲಸೆ ಬಹಳ ಕಡಿಮೆ. ದೆಹಲಿ ಸರಕಾರದಲ್ಲಿ ಕೆಲಸ ಮಾಡುತ್ತಿದ್ದ ಹಿರಿಯ ಐ ಎ ಎಸ್ ಅಧಿಕಾರಿ ಶ್ರೀ ವಿ ವಿ ಭಟ್ ಅವರು ಅಂಕಿ ಅಂಶಗಳನ್ನು ಆಧರಿಸಿ ಹೇಳಿದ ಪ್ರಕಾರ ದೆಹಲಿಯಲ್ಲಿ ಸುಮಾರು 12 ಸಾವಿರ ಕನ್ನಡಿಗರು ವಾಸಿಸುತ್ತಿದ್ದಾರೆ. ತಮಿಳರ ಸಂಖ್ಯೆಯು ಒಂದು ಲಕ್ಷದ ಮೂವತ್ತು ಸಾವಿರದಷ್ಟಿದ್ದರೆ, ತೆಲುಗರು ಹೆಚ್ಚು ಕಡಿಮೆ ಅಷ್ಟೇ ಸಂಖ್ಯೆಯಲ್ಲಿದ್ದಾರೆ. ಮಲೆಯಾಳಿಗಳು ಸುಮಾರು ಒಂದು ಲಕ್ಷದಷ್ಟಿದ್ದಾರೆ. ಇದನ್ನು ಗಮನಿಸಿದರೆ ಕರ್ನಾಟಕದ ವಲಸೆ ಎಷ್ಟು ಕಡಿಮೆ ಎಂಬುದು ತಾನಾಗಿಯೇ ಸ್ಪಷ್ಟವಾಗುತ್ತದೆ. 20 ನೇ ಶತಮಾನದ ಆರಂಭದ ಕಾಲದಲ್ಲಿ ಕರಾವಳಿ ಭಾಗದಿಂದ ದೊಡ್ಡ ಪ್ರಮಾಣದಲ್ಲಿ ಜನರು ಮುಂಬೈಗೆ ವಲಸೆ ಹೋದ ಕತೆ ನಮಗೆಲ್ಲ ತಿಳಿದೇ ಇದೆ, ಆದರೆ ಅದರ ಪ್ರಮಾಣ ಈಗ ಕಡಿಮೆಯಾಗುತ್ತಿದೆ. ಹೋಟೆಲ್ ಉದ್ಯಮದಲ್ಲಿ ತೊಡಗಿಸಿಕೊಂಡ ಕರಾವಳಿಯ ತುಳುವರು ಮಾತ್ರ ದೇಶದಾದ್ಯಂತ ಇಂದಿಗೂ ಕಾಣಸಿಗುತಾರೆ, ಆದರೆ ಕರ್ನಾಟಕದ ಇತರ ಭಾಗದ ಜನರು ಮಾತ್ರ ಎಲ್ಲಿಯೂ ಆ ಪ್ರಮಾಣದಲ್ಲಿ ಕಾಣಸಿಗುತ್ತಿಲ್ಲ. ಒಮ್ಮೆ ಗೋವಾಕ್ಕೆ ಹೋಗಿದ್ದೆ, ಅಲ್ಲಿ ಕಟ್ಟಡದ ಕೆಲಸದಲ್ಲಿ ನಿರತರಾಗಿದ್ದ ಬಡವರೆಲ್ಲ ಬಿಜಾಪುರದ ಕಡೆಯಿಂದ ವಲಸೆ ಬಂದವರಾಗಿದ್ದರು. ಹಾಗಾದರೆ ಕರಾವಳಿ ಮತ್ತು ಬಿಜಾಪುರ ಬಿಟ್ಟರೆ ಉಳಿದೆಡೆಗಳಿಂದ ಕನ್ನಡಿಗರು ಹೊರಗಡೆಗೆ ಹೋಗುತ್ತಿಲ್ಲವೇ? ಅವರೆಲ್ಲ ಇರುವಲ್ಲಿಯೇ ಸುಖವಾಗಿದ್ದಾರೆಯೇ?

ಕರ್ನಾಟಕದ ಪ್ರಖ್ಯಾತ ಅರಸರಲ್ಲಿ ಒಬ್ಬನಾಗಿದ್ದ ಆರನೇ ವಿಕ್ರಮಾದಿತ್ಯನ ಕಾಲದಲ್ಲಿ ಕರ್ನಾಟಕದಿಂದ ಸುಮಾರು ಆರು ನೂರು ಕುಟುಂಬಗಳು ಉತ್ತರ ಭಾರತದ ಕಡೆ ವಲಸೆ ಹೋದವು ಎಂದು ಇತಿಹಾಸ ಸಂಶೋಧಕರಾದ ಡಾ. ಯು.ಎಸ್. ಮೂರ್ತಿ ಅವರು ಒಮ್ಮೆ ಹೇಳಿದ್ದರು.

ಒಮ್ಮೆ ಬಿಹಾರದಲ್ಲಿ ಅಲೆದಾಡುತ್ತಿದ್ದೆ. ಕೋಸಿ ನದಿ ದಂಡೆಯಲ್ಲಿನ ಇತಿಹಾಸ ಪ್ರಸಿದ್ಧ ವೈಶಾಲಿಯ ಪುರಾತನ ಅವಶೇಷಗಳನ್ನು ನೋಡಿ, ನೇಪಾಲ ಗಡಿ ಭಾಗದಲ್ಲಿರುವ ಪುಟ್ಟ ಊರು ಭವಾನಿಪುರದಲ್ಲಿ ಇಳಿದುಕೊಂಡಿದ್ದೆ. ಅಲ್ಲಿ ರಾತ್ರಿ ಹರಟುತ್ತಿರುವಾಗ ಮನೆಯ ಯಜಮಾನ ನನ್ನತ್ತ ವಿಶೇಷ ಪ್ರೀತಿಯಿಂದ ನೋಡಿ ಹೇಳಿದರು–' ನಮ್ಮ ಮೂಲವೂ ಕರ್ನಾಟಕವೇ, ಯಾವುದೋ ಕಾಲದಲ್ಲಿ ಈ ಕಡೆ ಬಂದು ನೆಲೆಸಿದೆವು. ನಾವು ಕಾಯಸ್ಥರು, ಅಂದರೆ ಯುದ್ಧದಲ್ಲಿ ನಿಸ್ಸೀಮರು, ನಮ್ಮ ದೇಹ ನೋಡಿದರೆ ನಿಮಗೆ ಏನೂ ಅನಿಸುವುದಿಲ್ಲವೇ? ಎಂದರು. ಅವಕ್ಕಾದ ನಾನು ಅವರನ್ನು ದಿಟ್ಟಿಸಿ ನೋಡಿದೆ. ಆರು ಅಡಿಗಳಿಗೂ ಹೆಚ್ಚಿಗೆ ಎತ್ತರವಿದ್ದ ಅವರು ನನಗೆ ವಿಕ್ರಮಾದಿತ್ಯನ ಕಾಲದ ಕನ್ನಡಿಗರ ವಲಸೆಯನ್ನು ನೆನೆಪಿಸಿದರು. ಇದೀಗ ವಾರಣಾಸಿಯಲ್ಲಿ ಸಾಕಷ್ಟು ಸಂಖ್ಯೆಯ ಕನ್ನಡಿಗರಿದ್ದಾರೆ. ಅಲ್ಲಿರುವ ಪ್ರಖ್ಯಾತವಾದ ಜಂಗಮವಾಡಿ ಮಠ ಕನ್ನಡಿಗರದು ಮಾತ್ರವಲ್ಲ ಇತಿಹಾಸ ಪ್ರಸಿದ್ಧವಾದುದು.

ಈ ಭಾಷಿಕರು ಭಾಷೆಯ ಬಗೆಗೆ ಹೊಂದಿರುವ ಭಾವನೆಗಳನ್ನು ಗಮನಿಸಿ. ಮೊನ್ನೆ ದೆಹಲಿ ತಮಿಳ್ ಸಂಘಂಗೆ ಒಂದು ಕಾರ್ಯಕ್ರಮಕ್ಕೆ ಹೋಗಿದ್ದೆ. ಅಲ್ಲಿ ನೆರೆದಿದ್ದ ಎಲ್ಲ ಪುಟಾಣಿಗಳೂ ತಮಿಳಿನಲ್ಲಿಯೇ ಮಾತಾಡುತ್ತಿದ್ದರು. ತಮಿಳರು ಹೋದ ಕಡೆಯೆಲ್ಲ ತಮ್ಮ ಭಾಷೆ ಸಂಸ್ಕೃತಿ ಅಂತ ಹೇಳಿಕೊಂಡು ಅದನ್ನು ಪ್ರಚಾರ ಮಾಡುತ್ತಾರೆ. ಮಲೆಯಾಳಿಗಳು ಹೋದ ಕಡೆಯೆಲ್ಲ ಸಂಘ ಸಂಸ್ಥೆ ಅಂತ ಕಟ್ಟಿಕೊಂಡು ಕೆಲಸ ಮಾಡುವುದಿಲ್ಲ. ಆದರೆ ಪರಸ್ಪರ ಸಹಾಯ ಮಾಡಿಕೊಂಡು ಹೋದ ಕಡೆಗಳಲ್ಲಿ ಮಲೆಯಾಳಂ ಮಾತಾಡುತ್ತಾ ಬೆಳೆಯುತ್ತಾರೆ.

ಕನ್ನಡಿಗರು ಏನು ಮಾಡುತ್ತಾರೆ? ಕರ್ನಾಟಕ ಸಂಘದ ಆವರಣದಲ್ಲಿ ಕಾಣಬರುವ ಬಹುತೇಕ ಮಕ್ಕಳೂ ಹಿಂದಿಯಲ್ಲಿ ಮಾತಾಡುತ್ತಾರೆ, ಅವರ ತಂದೆ ತಾಯಂದಿರೂ ಮಕ್ಕಳೊಡನೆ ಹಿಂದಿಯಲ್ಲಿಯೇ ವ್ಯವಹರಿಸುತ್ತಾರೆ. ಅಂದರೆ ಕನ್ನಡಿಗರು ಬಹಳ ಬೇಗ ಮಾತ್ರ ಭಾಷೆಯನ್ನು ಮರೆತು ಬಿಡುತ್ತಾರೆ. ಇದನ್ನು ಸರಿಪಡಿಸುವುದು ಹೇಗೆ?

ಹಾಗೆ ನೋಡಿದರೆ, ಕನ್ನಡ ಕಲಿತು ಹೊರನಾಡಿಗೆ ಬಂದವರು ಕನ್ನಡವನ್ನು ಬೇಗ ಮರೆಯುವುದಿಲ್ಲ. ಒಂದೆರಡು ವರ್ಷಗಳ ಕಾಲ ಹೊರನಾಡಿನಲ್ಲಿ ಇದ್ದು ಮತ್ತೆ ಕರ್ನಾಟಕಕ್ಕೆ ಹಿಂದಿರುಗುವವರೂ ಕನ್ನಡವನ್ನು ಕಾಯ್ದಿಟ್ಟುಕೊಳ್ಳುತ್ತಾರೆ. ಆದರೆ ಹೊರನಾಡಿನಲ್ಲಿಯೇ ನೆಲೆಸುವವರಿಗೆ ಕನ್ನಡ ಒಂದು ಅಗತ್ಯವೇನೂ ಆಗಿರುವುದಿಲ್ಲ. ಹೊರನಾಡಿನಲ್ಲಿಯೇ ಹುಟ್ಟಿ ಬೆಳೆದ ಮಕ್ಕಳಿಗೆ ಕನ್ನಡವು ಅನ್ನದ ಪ್ರಶ್ನೆಯೂ ಅಲ್ಲ. ಹೀಗಾಗಿ ಕನ್ನಡ ಮರೆಯುವುದು ಒಂದು ಸಹಜ ಪ್ರಕ್ರಿಯೆ.

ಇಂಥ ಕನ್ನಡ ಮರೆಯುತ್ತಿರುವ ದೆಹಲಿಯ ಕನ್ನಡದ ಮಕ್ಕಳನ್ನು, ತನ್ನಲ್ಲಿ ಒಳಗೊಳಿಸಿಕೊಳ್ಳುವ ಒಂದು ಪ್ರಕ್ರಿಯೆಯಾಗಿ ಈಚೆಗೆ ಸಂಘದಲ್ಲಿ ನೃತ್ಯ ಸಂಭ್ರಮ ನಡೆಯಿತು. ಮಕ್ಕಳು ದೊಡ್ಡ ಸಂಖ್ಯೆಯಲ್ಲಿ ಉತ್ಸಾಹದಿಂದಲೇ ಸೇರಿದ್ದರು. ಬೇರೆ ಭಾಷೆಯ ಹಾಡುಗಳಿಗೆ ಅವರೆಲ್ಲ ಹೆಜ್ಜೆ ಹಾಕಿದರು. ಈ ಪ್ರಕ್ರಿಯೆಯ ತೊಡಕುಗಳನ್ನು ಪೂಜಾ ಪ್ರದೀಪ್ ಮತ್ತು ಆಶಾ ಮಹದೇವ್ ಅವರು ಅತ್ಯಂತ ಸಮರ್ಪಕವಾಗಿ ನಿರೂಪಿಸಿದರು. ಸಂಘದ ಅಧ್ಯಕ್ಷರಾದ ಶ್ರೀ ವಸಂತ ಶೆಟ್ಟಿ ಬೆಳ್ಳಾರೆ ಅವರು 'ಮುಂದಿನ ದಿನಗಳಲ್ಲಿ ಈ ಮಕ್ಕಳು ಕನ್ನಡದ ಹಾಡುಗಳಿಗೆ ಹೆಜ್ಜೆ ಹಾಕಲಿದ್ದಾರೆ' ಎಂಬ ಆಶಾವಾದವನ್ನೂ ಪ್ರಕಟಿಸಿದರು. ಸಂಘದ ಇಂಥ ಕಾರ್ಯಕ್ರಮಗಳು ಕನ್ನಡಕ್ಕೆ ಬೆನ್ನು ಹಾಕುತ್ತಿರುವ ಮಕ್ಕಳನ್ನು ಕನ್ನಡದ ಕಡೆಗೆ ಕರೆದು ತಂದೀತೇ ಎಂಬುದಕ್ಕೆ ಕಾಲವೇ ಉತ್ತರ ಹೇಳಬೇಕು. ಕನ್ನಡ ಅನ್ನದ ಪ್ರಶ್ನೆಯಾಗದೇ ಇದ್ದಾಗ ಉಳಿದೀತು ಹೇಗೆ ಎಂಬ ಪ್ರಶ್ನೆಗೆ ನನ್ನಲ್ಲಿ ಉತ್ತರವಿಲ್ಲ. ಅ



*ಡಾ. ಪುರುಷೋತ್ತಮ ಬಿಳಿಮಲೆ*

# ಸ್ಥಳೀಯ ಪ್ರತಿಭೆಗಳಿಂದ ನೃತ್ಯ ಕಾರ್ಯಕ್ರಮ

ದೆಹಲಿ ಕರ್ನಾಟಕ ಸಂಘ ಸ್ಥಳೀಯ ಕನ್ನಡ ಪ್ರತಿಭೆಗಳನ್ನು ಪ್ರೋತ್ಸಾಹಿಸುವ ಸಲುವಾಗಿ ಒಂದು ವಾರಗಳ ಕಾಲ ನೃತ್ಯ ತರಬೇತಿ ನೀಡಿ ಅವರಿಂದ ನೃತ್ಯ ಕಾರ್ಯಕ್ರಮವನ್ನು ಇದೇ ಮಾರ್ಚ್ 29ರಂದು ಆಯೋಜಿಸಲಾಗಿತ್ತು. ಅತ್ಯಂತ ಕಡಿಮೆ ಅವಧಿಯಲ್ಲಿ ಸುಮಾರು 150 ಸ್ಥಳೀಯ ಮಕ್ಕಳಿಗೆ ತರಬೇತಿ ನೀಡಿ ಅವರಿಂದ ಅತ್ಯುತ್ತಮವಾದ ಪ್ರದರ್ಶನ ನೀಡುವಂತೆ ಮಾಡಿದ್ದು ಪ್ರಸಿದ್ದ ಮಂಗಳೂರಿನ ಬಾಯ್‌ರ್ಝೋನ್ ಡಾನ್ಸ್ ಅಕಾಡೆಮಿ ತಂಡದ ಸದಸ್ಯರು. ಈ ಸಂದರ್ಭದಲ್ಲಿ ಸುಮಾರು 600ಕ್ಕೂ ಹೆಚ್ಚು ದೆಹಲಿ ಕನ್ನಡಿಗರು ಭಾಗವಹಿಸಿದ್ದರು. ಈ ಕಾರ್ಯಕ್ರಮದಲ್ಲಿ ತರಬೇತಿ ನೀಡಿದ ಬಾಯ್‌ರ್ಝೋನ್ ತಂಡದ ತರಬೇತಿದಾರರನ್ನು ಅಭಿನಂದಿಸಲಾಯಿತು. ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷ ಶ್ರೀ ವಸಂತ ಶೆಟ್ಟಿ ಬೆಳ್ಳಾರೆ, ಜಾನಪದ ವಿದ್ವಾಂಸ ಡಾ. ಪುರುಷೋತ್ತಮ ಬಿಳಿಮಲೆ ಹಾಗೂ ದೆಹಲಿಯ ಗ್ರಾಹಕರ ನ್ಯಾಯಾಲಯದ ನ್ಯಾಯಾಧೀಶರಾದ ಡಾ. ಎಸ್.ಎಂ. ಕಂಠೀ ಹಾಗೂ ದೆಹಲಿ ಕರ್ನಾಟಕ ಸಂಘದ ಕಾರ್ಯದರ್ಶಿ ಶ್ರೀ ಸಿ.ಎಂ. ನಾಗರಾಜ ಅವರು ಉಪಸ್ಥಿತರಿದ್ದರು. ಸಂಘದ ಉಪಾಧ್ಯಕ್ಷೆ ಶ್ರೀಮತಿ ಆಶಾಲತ ಎಂ ಹಾಗೂ ಕಾರ್ಯಕಾರಿ ಸಮಿತಿ ಸದಸ್ಯೆ ಶ್ರೀಮತಿ ಪೂಜಾ ರಾವ್ ಅವರು ಕಾರ್ಯಕ್ರಮ ನಿರೂಪಿಸಿದರು. ಅ

*ಅಭಿಮತ ವರದಿ*






















ನೃತ್ಯ ಸಂಭ್ರಮ


ದೆಹಲಿ ಕರ್ನಾಟಕ ಸಂಘ
ನೃತ್ಯ ಸಂಭ್ರಮ




ದೆಹಲಿ ಕರ್ನಾಟಕ ಸಂಘ
ನೃತ್ಯ ಸಂಭ್ರಮ




ದೆಹಲಿ ಕರ್ನಾಟಕ ಸಂಘ
ನೃತ್ಯ ಸಂಭ್ರಮ




ದೆಹಲಿ ಕರ್ನಾಟಕ ಸಂಘ


ದೆಹಲಿ ಕರ್ನಾಟಕ ಸಂಘ




ನೃತ್ಯ ಸಂಭ್ರಮ

## ಕುವೆಂಪು ರಾಷ್ಟ್ರೀಯ ಪುರಸ್ಕಾರ ಪ್ರದಾನ

# ಕುವೆಂಪು ಸಾಹಿತ್ಯವನ್ನು ವಿಶ್ವಮಟ್ಟಕ್ಕೆ ತಲುಪಿಸುವ ಪ್ರಯತ್ನವಾಗಬೇಕು

ಕುಪ್ಪಳ್ಳಿಯ ರಾಷ್ಟ್ರಕವಿ ಕುವೆಂಪು ಪ್ರತಿಷ್ಠಾನದ ವತಿಯಿಂದ 2014ರ ಸಾಲಿನ ಕುವೆಂಪು ರಾಷ್ಟ್ರೀಯ ಪುರಸ್ಕಾರವನ್ನು ಹಿಂದಿ ಸಾಹಿತ್ಯದ ಪ್ರಸಿದ್ಧ ವಿಮರ್ಶಕ ಪ್ರೊ. ನಾಮವರ್ ಸಿಂಗ್ ಅವರಿಗೆ ದೆಹಲಿ ಕರ್ನಾಟಕ ಸಂಘದ ಸಭಾಂಗಣದಲ್ಲಿ ನಡೆದ ವಿಶೇಷ ಸಮಾರಂಭವೊಂದರಲ್ಲಿ ಸುಪ್ರಿಂ ಕೋರ್ಟ್‌ನ ನ್ಯಾಯಾಧೀಶ ಜಸ್ಟಿಸ್ ವಿ. ಗೋಪಾಲ ಗೌಡ ಅವರು ಇದೇ ಮಾರ್ಚ್ 15ರಂದು ಪ್ರದಾನ ಮಾಡಿದರು. ಪ್ರತಿಷ್ಠಾನದ ಅಧ್ಯಕ್ಷ ನಾಡೋಜ ಹಂಪ ನಾಗರಾಜಯ್ಯ ಅವರು ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು. ಈ ಪ್ರಶಸ್ತಿ ಐದು ಲಕ್ಷ ರೂಪಾಯಿ ನಗದು, ಸ್ಮರಣಿಕೆ ಹಾಗೂ ಶಾಲುಗಳನ್ನೊಳಗೊಂಡಿದೆ.

ಅನಿರೀಕ್ಷಿತವಾಗಿ ಯಾವುದೇ ಮುನ್ಸೂಚನೆಯಿಲ್ಲದೆ ತನಗೆ ಈ ಮಹಾನ್ ಕವಿಯ ಹೆಸರಿನ ಪುರಸ್ಕಾರವನ್ನು ನೀಡಿ ಗೌರವಿಸಿದ ಕುವೆಂಪು ಪ್ರತಿಷ್ಠಾನವನ್ನು ಪ್ರೊ. ನಾಮವರ್ ಸಿಂಗ್ ಅವರು ಶ್ಲಾಘಿಸಿದರು. ಕುವೆಂಪು ಅವರನ್ನು ತಾನು ಸಂಧಿಸಿದ ಸಂದರ್ಭಗಳನ್ನು ವಿವರಿಸುತ್ತಾ ಕುವೆಂಪು ಅವರ ವರ್ಚಸ್ಸು ಅವರೊಬ್ಬ ಮಹಾನ್ ಕವಿಯೆಂಬುದನ್ನು ಸಾರುತ್ತಿತ್ತು ಎಂದು ಅವರು ಜ್ಞಾಪಿಸಿದರು. 1955ರಲ್ಲೊಮ್ಮೆ ಪ್ರೊ. ನಾಮವರ್ ಸಿಂಗ್ ಅವರು ಮೈಸೂರಿಗೆ ಬಂದಾಗ ಕುವೆಂಪು ಅವರನ್ನು ಮಹಾರಾಜ ಕಾಲೇಜಿನಲ್ಲಿ ಭೇಟಿಯಾದೆ ಎಂದರು. ನಂತರ ಕುವೆಂಪು ಅವರಿಗೆ ಹಿಂದಿ ಸಾಹಿತಿ ಉಮಾಶಂಕರ್ ಜೋಶಿ ಅವರ ಜತೆ ಜ್ಞಾನಪೀಠ ಪ್ರಶಸ್ತಿ ದೊರೆತ ಸಂದರ್ಭದಲ್ಲಿ ಅವರನ್ನು ದೆಹಲಿಯಲ್ಲಿ ಭೇಟಿಯಾಗಿದ್ದೆ ಎಂದು ಪ್ರೊ. ನಾಮವರ್ ಸಿಂಗ್ ಅವರು ನೆನೆದರು. ಇಷ್ಟು ವರ್ಷಗಳ ನಂತರ ಕುವೆಂಪು ಅವರ ಹೆಸರಿನಲ್ಲಿ ಪುರಸ್ಕಾರವನ್ನು ಪಡೆಯುವುದು ನನ್ನ ಸೌಭಾಗ್ಯ ಎಂದರು. ದೆಹಲಿ ಕರ್ನಾಟಕ ಸಂಘದ ಸಭಾಂಗಣದಲ್ಲಿ ಸೇರಿದ್ದ ಕನ್ನಡ ಮತ್ತು ಹಿಂದಿಯ ಸಾಹಿತಿಗಳನ್ನು ಮತ್ತು ಸಹೃದಯರನ್ನು ಉದ್ದೇಶಿಸುತ್ತಾ ಪ್ರೊ. ನಾಮವರ್ ಸಿಂಗ್ ಅವರು ಇದು ಕಾವೇರಿ–ಜಮುನಾದ ಸಂಗಮದ ಪ್ರತೀಕದಂತಿದೆ ಎಂದರು.

ಕಳೆದ ಶತಮಾನದ ಆರಂಭದ ದಶಕಗಳವರೆಗೂ ಇಲ್ಲಿನ ಕಾವ್ಯದಲ್ಲಿ ಭಾರತೀಯ ಪರಂಪರೆಯ ಕಾವ್ಯಮೀಮಾಂಸೆ ಮತ್ತು ಲಕ್ಷಣಶಾಸ್ತಗಳೇ ಪ್ರಾಬಲ್ಯ ಬೀರಿದ್ದವು. ಪೂರ್ವದ ಮತ್ತು ಪಶ್ಚಿಮದ ಶೈಲಿಗಳ ಮೂಲಕ ಸಾಹಿತ್ಯವನ್ನು ಮುಖ್ಯವಾಗಿ ಕಾವ್ಯವನ್ನು ಅರ್ಥ ಮಾಡಿಕೊಳ್ಳುವಂತಹ ಕೆಲಸಗಳನ್ನು ಕುವೆಂಪು ಮತ್ತು ಪ್ರೊ. ನಾಮವರ್ ಸಿಂಗ್ ಅವರು ಮಾಡಿದರು ಎಂದು ನಾಡೋಜ ಹಂಪ ನಾಗರಾಜಯ್ಯ ಅವರು ಹೇಳಿದರು. ಅವರಿಬ್ಬರ ವಿಚಾರಗಳಲ್ಲಿಯೂ ಕುತೂಹಲಕಾರವಾದ ಸಾಮ್ಯತೆಯನ್ನು ಕಾಣಬಹುದು. ಇಬ್ಬರೂ ವೈಚಾರಿಕ ಚಿಂತಕರಾಗಿದ್ದರು, ಇಬ್ಬರೂ ವೈಸ್ ಚಾನ್ಸಲರ್ ಆಗಿದ್ದರು ಮತ್ತು ಇಬ್ಬರೂ ಸಾಹಿತ್ಯದ ಪ್ರೊಫೆಸರ್ ಆಗಿದ್ದರು. ಇಬ್ಬರೂ ಸಾಹಿತ್ಯ ವಿಮರ್ಶೆಯಲ್ಲಿ ಹೊಸದೊಂದು ಚಿಂತನಾಕ್ರಮವನ್ನೇ ತಂದರು ಎಂದು ಅವರು ನುಡಿದರು.

ಭಾರತದ ಸಂವಿಧಾನವನ್ನು 1950ರಲ್ಲಿ ಅಳವಡಿಸಿಕೊಂಡರೂ, ಸಂವಿಧಾನದಲ್ಲಿ ಅಡಕವಾಗಿರುವ ಅಪಾರವಾದ ಮೌಲ್ಯಗಳು ಕುವೆಂಪು ಅವರ ಕೃತಿಗಳಲ್ಲಿ ಮತ್ತು ಚಿಂತನೆಗಳಲ್ಲಿ ಅದಕ್ಕಿಂತ ಮೊದಲೇ ಕಂಡು ಬಂದಿವೆ, ಎಂದು ಜಸ್ಟಿಸ್ ವಿ. ಗೋಪಾಲ ಗೌಡ ಅವರು ಹೇಳಿದರು. ಧರ್ಮ ಮತ್ತು ಜಾತಿಗಳನ್ನು ಮೀರಿದ ಸೆಕ್ಯುಲರಿಸಂ, ಸಾಮಾಜಿಕ ಮತ್ತು ಆರ್ಥಿಕ ಸಮಾನತೆ, ಮಹಿಳಾ ಸ್ವಾತಂತ್ರ್ಯ ಮತ್ತು ಸಮಾನತೆಗಳನ್ನು ನಾವು ಸಂವಿಧಾನದಲ್ಲಿ ಅಳವಡಿಸಿಕೊಂಡಿರುವುದು ಕುವೆಂಪು ಅವರ ವಿಚಾರಗಳಿಂದಲೇ ಎನ್ನುವಂತಿದೆ. ಪರಿಸರ ರಕ್ಷಣೆ ಮತ್ತು ಜೈವಿಕ ಸಮತೋಲನದ ಅಗತ್ಯತೆಯ ಕುರಿತೂ ಕುವೆಂಪು ಅವರು ಚಿಂತಿಸಿದ್ದರು. ಪ್ರೊ. ನಾಮವರ್ ಸಿಂಗ್ ಅವರಂತಹ ಸಾಹಿತಿಗಳು ಕುವೆಂಪು ಅವರ ವಿಚಾರಗಳನ್ನು ಮುಂದುವರಿಸಿಕೊಂಡು ಹೋಗುವುದು ಮುಖ್ಯವಾಗಿದೆ. ಕುವೆಂಪು ಅವರ ವಿಚಾರಗಳನ್ನು ಇಂದಿನ ತಲೆಮಾರಿಗೆ ತಲುಪಿಸುವ ಅಗತ್ಯತೆ ಇದೆ ಎಂದು ಅವರು ಅಭಿಪ್ರಾಯ ಪಟ್ಟರು.

ಖ್ಯಾತ ಬರಹಗಾರ ಪ್ರೊ. ಎಚ್.ಎಸ್. ಶಿವಪ್ರಕಾಶ್ ಅವರು ಕುವೆಂಪು ಅವರ ಕುರಿತು ಮಾತಾಡುತ್ತಾ ಕನ್ನಡದ ಆದಿಕವಿ ಪಂಪ 10ನೇ ಶತಮಾನದಲ್ಲೆ ಕನ್ನಡ ಕಾವ್ಯಪರಂಪರೆಯನ್ನು ಆರಂಭಿಸಿದರೆ, 20ನೇ ಶತಮಾನದಲ್ಲಿ ಕುವೆಂಪು ಅವರು ಆಧುನಿಕ ಕನ್ನಡ ಕಾವ್ಯದ ಪರಂಪರೆಯನ್ನು ಆರಂಭಿಸಿದರು ಎಂದರು. ಕುವೆಂಪು ಅವರ ಶ್ರೀರಾಮಾಯಣ ದರ್ಶನಂ ಅನ್ನು ಓದಿದರೆ ಅವರು ಅದರಲ್ಲಿ ಭಾರತೀಯ ಸಾಹಿತ್ಯದ ಮಹಾನ್ ಕವಿಗಳಾದ ಕಾಳಿದಾಸ, ತುಳಸೀದಾಸ ಮತ್ತು ಭಾರತೀಯ ಸಾಹಿತ್ಯದ ಅತ್ಯುತ್ತಮವೆಂದೆನಿಸುವ ಎಲ್ಲಾ ಸಾರಗಳನ್ನು ಕಾಣಬಹುದು. ಕುವೆಂಪು ಅವರು ಕರ್ನಾಟಕದ ಅದ್ಭುತ ಚಮತ್ಕಾರಿ, ಎಂದು ಪ್ರೊ. ಶಿವಪ್ರಕಾಶ್ ನುಡಿದರು.

ಕುವೆಂಪು ಅವರ ಉತ್ಕೃಷ್ಟ ಪ್ರಮಾಣದ ಕೃತಿಗಳನ್ನು ನೋಡಿದರೆ ಅವರನ್ನು ಯಾರೂ ಇದುವರೆಗೂ ಹಿಂದಿಕ್ಕಿಲ್ಲ. ಅಲ್ಪದೊಳ್ ಸೊಗಮಿಲ್ಲ, ಭುಮವೊಂದೇ ಸುಖ ಸುಖಂ ಎಂದ ಕುವೆಂಪು ಅವರದ್ದು ಲೌಕಿಕ ಆಯಾಮ ಮಾತ್ರವಲ್ಲ ಬದಲು ವಿಶ್ವವ್ಯಾಪಿ ಸಾರ್ವತ್ರಿಕ ಆಯಾಮದ ಚಿಂತನೆಗಳಾಗಿದ್ದವು. ಕುವೆಂಪು ಅವರು ರವೀಂದ್ರನಾಥ ಠಾಗೋರ್ ಅವರ ಮಟ್ಟಕ್ಕೆ ಬೆಳೆದವರು. ಆದರೆ ಠಾಗೋರರಿಗಿಂತಲೂ ತೀವ್ರವಾಗಿ ಕುವೆಂಪು ಅವರು ಬರೆದರು. ಠಾಗೋರ್ ಅವರ ಚಿತ್ರ ನಾಟಕವನ್ನು ಕನ್ನಡದಲ್ಲಿ ಚಿತ್ರಾಂಗದ ಎಂದು ಕುವೆಂಪು ಅವರು ತಂದರು. ಈ ಎರಡು ಕೃತಿಗಳನ್ನು ನೋಡಿದಾಗ ನಮಗೆ ಕುವೆಂಪು ಅವರ ಬರಹದ ತೀಕ್ಷ್ಣತೆಯ ಅರಿವಾಗುತ್ತದೆ ಎಂದು ಪ್ರೊ. ಶಿವಪ್ರಕಾಶ್ ಅವರು ವಿವರಿಸಿದರು.

ಕುವೆಂಪು ಕವಿ ಮಾತ್ರವಲ್ಲ, ಅವರೊಬ್ಬ ಮಹಾನ್ ಕಾದಂಬರಿಕಾರ ಕೂಡಾ. ಅವರ ಎರಡು ಕಾದಂಬರಿಗಳು–ಕಾನೂರು ಸುಬ್ಬಮ್ಮ ಹೆಗ್ಗಡಿತಿ ಮತ್ತು ಮಲೆಗಳಲ್ಲಿ ಮದುಮಗಳು– ಕನ್ನಡ ಸಾಹಿತ್ಯದ ಪ್ರಮಾಣಿತ ಕೃತಿಗಳಾಗಿವೆ. ಭಾರತದಲ್ಲಿ ಬರೆದ ಮಾದರಿ ನಾಟಕಕಾರರು ಕುವೆಂಪು. ಸಾಮಾಜಿಕ ಕಾರಣಗಳಿಂದ ಅವರ ನಾಟಕಗಳನ್ನು ಅಲಕ್ಷಿಸಲಾಗಿದೆ. ನ್ಯಾಷನಲ್ ಸ್ಕೂಲ್ ಆಫ್ ಡ್ರಾಮಾ ಕೂಡಾ ಅವರ ನಾಟಕಗಳನ್ನು ಆಡಲಿಲ್ಲ ಎಂದು ಪ್ರೊ. ಶಿವಪ್ರಕಾಶ್ ಅವರು ವಿಷಾದಿಸಿದರು.



ಕುವೆಂಪು ಕುರಿತು ಕರ್ನಾಟಕದಾಚೆ ಮೌಢ್ಯವೇಕೆ ಎಂದು ಅವರು ಪ್ರಶ್ನಿಸಿದರು. ಕುವೆಂಪು ಅವರ ಕುರಿತು ನಿಗೂಢವಾದ ಮೌನವಿದೆ. ರಾಷ್ಟ್ರೀಯ ಮತ್ತು ಅಂತರಾಷ್ಟ್ರೀಯ ಮಟ್ಟದ ಕನ್ನಡದ ಇಬ್ಬರು ಬರಹಗಾರರು ಹಲವು ದಶಕಗಳಿಂದ ದೆಹಲಿಯ ಸಾಂಸ್ಕೃತಿಕ ರಂಗದಲ್ಲಿ ಹೆಸರುವಾಸಿಯಾಗಿದ್ದರೂ ಕುವೆಂಪು ಕುರಿತು ಅವರ ಮೌನ, ನಿಗೂಢ ಮಾತ್ರವಲ್ಲ ಶಂಕಿತವೂ ಆಗಿದೆ ಎಂದ ಪ್ರೊ. ಶಿವಪ್ರಕಾಶ್ ಅವರು ಕುವೆಂಪು ಅವರನ್ನು ರಾಷ್ಟ್ರ ಮತ್ತು ವಿಶ್ವಮಟ್ಟದಿಂದ ಹೊರಗಿಡಲು ವ್ಯವಸ್ಥಿತ ಪ್ರಯತ್ನಗಳಾಗಿವೆ ಎಂದು ನುಡಿದರು. ಕುಪ್ಪಳ್ಳಿಯ ಕುವೆಂಪು ಪ್ರತಿಷ್ಟಾನವು ಕುವೆಂಪು ರಾಷ್ಟ್ರೀಯ ಪುರಸ್ಕಾರವನ್ನು ಸ್ಥಾಪಿಸಿ ಕುವೆಂಪು ಅವರ ಸಾಹಿತ್ಯದ ಆಳ, ವಿಸ್ತಾರಗಳನ್ನು ಭಾರತದ ಇತರ ಭಾಷೆಗಳು ಅರ್ಥೈಸಲು ಮಾಡಿರುವ ಪ್ರಯತ್ನ ಬಹಳ ಉಪಯುಕ್ತವಾಗಿದೆ ಎಂದರು.

ಕುವೆಂಪು ಅವರು ವಿಮರ್ಶಕ, ಪ್ರಬಂಧಕಾರ ಮತ್ತು ತತ್ವಜ್ಞಾನಿ ಕೂಡ. ಮೊತ್ತ ಮೊದಲ ಬಾರಿ ಅವರು ಶೂದ್ರ ಸಂವೇದನೆಯನ್ನು ಕನ್ನಡ ಸಾಹಿತ್ಯಕ್ಕೆ ತಂದರು. ಅವರ ಶೂದ್ರ ಸಂವೇದನೆ ವಿಶ್ವ ಸಂವೇದನೆ ಕೂಡಾ. ಅವರು ಸಾವಿರ ವರ್ಷಗಳ ಕನ್ನಡ ಸಾಹಿತ್ಯದ ನುಡಿಗಟ್ಟುಗಳನ್ನು 20ನೇ ಶತಮಾನದ ಹೊಸಕಾವ್ಯದ ನುಡಿಗಟ್ಟನ್ನಾಗಿ ಹೊಸರೂಪದಲ್ಲಿ ತಂದರು. ಅವರ ಸಾಹಿತ್ಯದಲ್ಲಿ ವೇದಾಂತದ ಪ್ರಭಾವ ಗಾಢವಾಗಿದೆ. ವಿಶ್ವಮಟ್ಟದ ಘಟನೆಗಳು, ವೈಚಾರಿಕ ಮತ್ತು ಸೈದ್ಧಾಂತಿಕ ಕ್ರಾಂತಿಗಳ ಅಳಿವು ಉಳಿವಿನ ಕುರಿತು ಅವರು ಆಳವಾಗಿ ಅರಿತು ಅವುಗಳನ್ನು ತಮ್ಮ ಕೃತಿಗಳಲ್ಲಿ ಸೂಕ್ಷ್ಮವಾಗಿ ತರುತ್ತಿದ್ದರು ಎಂದು ಪ್ರೊ. ಶಿವಪ್ರಕಾಶ್ ವಿವರಿಸಿದರು.

ಕುವೆಂಪು ಅವರು ವಿಮರ್ಶಕರಿಗೆ ಸವಾಲು ಒಡ್ಡಿದರು. ನಾನೇರಿದೆತ್ತರಕ್ಕೆ ನೀನೇರಬಲ್ಲೆಯಾ ಎಂದರು. ಅಷ್ಟೊಂದು ವಿಮರ್ಶಕರು ಕುವೆಂಪು ಕುರಿತು ಕನ್ನಡದಲ್ಲಿ ಬರೆಯಲು ತೊಡಗಿದರೂ, ಯಾರೊಬ್ಬರೂ ಅವರು ಏರಿದ ಎತ್ತರಕ್ಕೆ ಏರಲಾಗಲಿಲ್ಲ. ಪ್ರತಿಯೊಬ್ಬರಿಗೂ ಕುವೆಂಪು ಅವರ ಎತ್ತರ ಗೊತ್ತಿತ್ತು. ಪ್ರೊ. ನಾಮವರ್ ಸಿಂಗ್ ಅವರಂತಹ ಮಹಾನ್ ವಿಮರ್ಶಕರು ಕನ್ನಡದಲ್ಲಿ ಇರದಿದ್ದುದರಿಂದ ಕುವೆಂಪು ಅವರ ಕೃತಿಗಳನ್ನು ವಿಮರ್ಶಿಸುವಂತಹವರು ಯಾರೂ ಇಲ್ಲದಿದ್ದುದು ದುರದೃಷ್ಟ ಎಂದು ಪ್ರೊ. ಶಿವಪ್ರಕಾಶ್ ಅಭಿಪ್ರಾಯ ಪಟ್ಟರು. ಕುವೆಂಪು ಪುರಸ್ಕಾರ ವಿಜೇತ ಪ್ರೊ. ನಾಮವರ್ ಸಿಂಗ್ ಅವರು ಭಾರತೀಯ ಭಾಷೆಗಳಲ್ಲಿ ಈಗಿರುವ ಮಹಾನ್ ವಿಮರ್ಶಕರು; ಅವರಿಗೆ ಪ್ರಶಸ್ತಿಯನ್ನು ನೀಡಿ ಗೌರವಿಸಿದ ಕುವೆಂಪು ಪ್ರತಿಷ್ಟಾನವನ್ನು ಅಭಿನಂದಿಸಿದರು. ಕುವೆಂಪು ಅವರ ಕೃತಿಗಳ ಉತ್ತಮವಾದ ಭಾಷಾಂತರ ಇನ್ನೂ ಆಗಬೇಕಿದೆ. ಕುವೆಂಪು ಅವರ ತತ್ವಜ್ಞಾನವನ್ನು ಅರಿಯಲು ಪ್ರೊ. ನಾಮವರ್ ಸಿಂಗ್ ಅವರಂತಹ ಬರಹಗಾರರನ್ನು ಓದುವುದೂ ಅಗತ್ಯವಿದೆ ಎಂದು ಪ್ರೊ. ಶಿವಪ್ರಕಾಶ್ ಹೇಳಿದರು.

ಖ್ಯಾತ ಹಿಂದಿ ಸಾಹಿತಿ ಪ್ರೊ. ಗಂಗಾ ಪ್ರಸಾದ್ ವಿಮಲ್ ಅವರು ಪ್ರೊ. ನಾಮವರ್ ಸಿಂಗ್ ಅವರ ಕುರಿತು ಮಾತನಾಡಿದರು. ಪ್ರೊ. ನಾಮವರ್ ಸಿಂಗ್ ಅವರು ಹೊಸತನದ ಹುಡುಕಾಟದಲ್ಲಿ ಯಾವಾಗಲೂ ತೊಡಗಿಸಿಕೊಂಡಿರುತ್ತಾರೆ. ಹೊಸ ಬರಹಗಾರರನ್ನು ಪ್ರೋತ್ಸಾಹಿಸಿ ಅವರನ್ನು ಮುಖ್ಯವಾಹಿನಿಗೆ ತರುವಲ್ಲಿ ಹೆಚ್ಚು ಪ್ರಯತ್ನ ಪಡುತ್ತಾರೆ ಎಂದು ಪ್ರೊ. ವಿಮಲ್ ಅವರು ನುಡಿದರು. ಅಧಿಕಾರದಲ್ಲಿರುವವರು ಯಾವಾಗಲೂ ಸಾಹಿತ್ಯವನ್ನು ಕಡೆಗಣಿಸುವತ್ತ ತೊಡಗಿದರೆ, ಪ್ರೊ. ನಾಮವರ್ ಸಿಂಗ್ ಅವರು ಸಾಹಿತ್ಯವನ್ನು ಸಮಾಜದ ಕೇಂದ್ರದತ್ತ ತರುತ್ತಾರೆ. ಭಾರತದ ಸಾಹಿತ್ಯದ ಕುರಿತು ವಿಮರ್ಶೆ ಚರ್ಚೆಗಳನ್ನು ಮಾಡುತ್ತಿರುವ ಪ್ರೊ. ನಾಮವರ್ ಸಿಂಗ್ ಅವರ ಕೃತಿಗಳು ಕನ್ನಡದಲ್ಲಿಯೂ ಭಾಷಾಂತರಗೊಳ್ಳಬೇಕು ಎಂದು ಪ್ರೊ. ವಿಮಲ್ ಅವರು ಬಯಸಿದರು.







ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷ ಶ್ರೀ ವಸಂತ ಶೆಟ್ಟಿ ಬೆಳ್ಳಾರೆ ಅವರು ಈ ಸಂದರ್ಭದಲ್ಲಿ ಮಾತಾಡುತ್ತಾ ಕನ್ನಡದ ಸಾಹಿತ್ಯ, ವಿಶೇಷವಾಗಿ ನಾಟಕಗಳು ಹಿಂದಿಗೆ ಅನುವಾದಗೊಳ್ಳಬೇಕು ಎಂದರು. ಕಾರ್ಯಕ್ರಮವನ್ನು ನಿರ್ವಹಿಸಿದ ಸಾಹಿತಿ ಡಾ. ಪುರುಷೋತ್ತಮ ಬಿಳಿಮಲೆ ಅವರು ಕನ್ನಡ ಮತ್ತು ಹಿಂದಿ ಸಾಹಿತ್ಯಗಳ ಲೇಖಕರು ಮತ್ತು ವಿದ್ಯಾರ್ಥಿಗಳು ಸೇರಿ ದೆಹಲಿಯಲ್ಲಿ ನಡೆಯುವ ಈ ಕಾರ್ಯಕ್ರಮ ಭಾರತೀಯ ಸಾಹಿತ್ಯದ ಕಾಲಘಟ್ಟದಲ್ಲಿ ಬಹಳ ಮಹತ್ತರವಾದ ಸಮಯ ಎಂದು ಹೇಳಿದರು. ಆರಂಭದಲ್ಲಿ ಸ್ವಾಗತಿಸಿದ ಕುವೆಂಪು ಪ್ರತಿಷ್ಟಾನದ ಕಾರ್ಯದರ್ಶಿ ಶ್ರೀ ಕಡಿದಾಳ್ ಪ್ರಕಾಶ್ ಅವರು ಈ ವರ್ಷದ ಕುವೆಂಪು ರಾಷ್ಟ್ರೀಯ ಪುರಸ್ಕಾರ ವಿಜೇತ ತೊಂಬತ್ತು ವರ್ಷದ ಪ್ರೊ. ನಾಮವರ್ ಸಿಂಗ್ ಅವರ ಅನಾರೋಗ್ಯದ ಕಾರಣ ಅವರು ಕುಪ್ಪಳ್ಳಿಗೆ ಪ್ರಯಾಣಿಸಲು ಆಗದೇ ಇದ್ದುದರಿಂದ ಪ್ರಶಸ್ತಿ ಪ್ರದಾನ ಕಾರ್ಯಕ್ರಮವನ್ನು ದೆಹಲಿಯಲ್ಲಿ ನಡೆಸಬೇಕಾಯಿತು ಎಂದರು. ಕಳೆದ ವರ್ಷ ಪ್ರತಿಷ್ಟಾನದ ಮೊದಲ ಪುರಸ್ಕಾರವನ್ನು ಮಲಯಾಳಂ ಲೇಖಕ ಕೆ. ಸಚ್ಚಿದಾನಂದನ್ ಅವರಿಗೆ ನೀಡಲಾಗಿದೆ ಎಂದು ಅವರು ತಿಳಿಸಿದರು.

ಕುವೆಂಪು ರಾಷ್ಟ್ರೀಯ ಪುರಸ್ಕಾರ ನಿಧಿಯ ದಾನಿ ಶ್ರೀ ಎಂ.ಸಿ. ನರೇಂದ್ರ ಮತ್ತು ಸಂಘದ ಪ್ರಧಾನ ಕಾರ್ಯದರ್ಶಿ ಶ್ರೀ ಸಿ.ಎಂ. ನಾಗರಾಜ ವೇದಿಕೆಯಲ್ಲಿ ಉಪಸ್ಥಿತರಿದ್ದರು. ಸಂಘದ ಉಪಾಧ್ಯಕ್ಷ ಶ್ರೀ ಬಿ.ಕೆ. ಬಸವರಾಜ್ ಮತ್ತು ಕೋಶಾಧಿಕಾರಿ ಡಾ. ವೈ. ಅವನೀಂದ್ರನಾಥ್ ರಾವ್ ಅವರು ಅತಿಥಿಗಳಿಗೆ ಪುಷ್ಪಗುಚ್ಛ ನೀಡಿ ಸ್ವಾಗತಿಸಿದರು. ಆರಂಭದಲ್ಲಿ ಕುವೆಂಪು ಅವರ ಕುರಿತು ಸಾಕ್ಷ್ಯಚಿತ್ರವೊಂದನ್ನು ಪ್ರದರ್ಶಿಸಲಾಯಿತು.

ಬೆಂಗಳೂರಿನ ಗಾಯಕ ರಾಮಚಂದ್ರ ಜಿ. ಹಡಪದ್ ಮತ್ತು ತಂಡದವರಿಂದ ನಾಡಗೀತೆ ಮತ್ತು ಸುಮಧುರ ಸಂಗೀತ ಕಾರ್ಯಕ್ರಮ ನಡೆಯಿತು. ಬೆಂಗಳೂರಿನ ಲಾಸ್ಯವರ್ಧನ ಟ್ರಸ್ಟ್ ಅವರಿಂದ ಕುವೆಂಪು ಅವರ ಹಾಡುಗಳಿಗೆ ಬ್ಯಾಲೆ ನೃತ್ಯ ಕಾರ್ಯಕ್ರಮ ನಡೆಯಿತು. ಈ ಕಾರ್ಯಕ್ರಮಗಳನ್ನು ಕರ್ನಾಟಕ ಸರಕಾರದ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಪ್ರಾಯೋಜಿಸಿತ್ತು. ಅ

***ಅಭಿಮತ ವರದಿ***

ಡಾ. ಪುರುಷೋತ್ತಮ ಬಿಳಿಮಲೆ ಅವರು ಬರೆದ ನಾಮವರ್ ಸಿಂಗ್ ಅವರ ಸಾಹಿತ್ಯಿಕ ಪರಿಚಯವನ್ನು ಓದುಗರು ಅಭಿಮತದ ಅಕ್ಟೋಬರ್ 2014ರ ಸಂಚಿಕೆಯಲ್ಲಿ ಕಾಣಬಹುದು.
(http://delhikarnatakasangha.com/abhimata2014.html)

# ಲಂಡನ್‌ನಲ್ಲಿ ಮೆರೆದ ಯಕ್ಷಮಂಜೂಷ



ಯಕ್ಷಗಾನದ ಪ್ರಚಾರ-ಪ್ರಸಾರದಲ್ಲಿ ತೊಡಗಿದ, ಶ್ರೀಮತಿ ವಿದ್ಯಾಕೊಳ್ಯೂರು ನೇತೃತ್ವದ ಯಕ್ಷ ಮಂಜೂಷ ಫೆಬ್ರವರಿ 28ರಂದು ಲಂಡನ್‌ನ ಭಾರತೀಯ ವಿದ್ಯಾ ಭವನದಲ್ಲಿ ಎರಡು ಗಂಟೆಗಳ ಕಾಲ ದೇಶ-ವಿದೇಶದ ಪ್ರೇಕ್ಷಕರನ್ನು ಮಂತ್ರಮುಗ್ಧಗೊಳಿಸಿತು. 'ಶ್ರೀಕೃಷ್ಣ ಪಾರಿಜಾತ - ನರಕಾಸುರ ಮೋಕ್ಷ' ಪ್ರಸಂಗ, ಯಕ್ಷಮಂಜೂಷದ ಇತ್ತೀಚಿನ ಹಿಟ್ ಪ್ರಸಂಗ ಅನ್ನುವುದು ಅಮೇರಿಕಾದಲ್ಲೇ ಸಾಬೀತಾಗಿದೆ.

ಪುರಾಣವನ್ನು ಪ್ರಸ್ತುತ ಲೋಕಕ್ಕೆ ತರುವ, ಪ್ರಸ್ತುತ ಲೋಕವನ್ನು ಪುರಾಣಕ್ಕೆ ಒಯ್ಯುವ ಸಹಜ ತಂತ್ರಗಾರಿಕೆಗೆ ಈ ಪ್ರಸಂಗ ಬಹಳ ಸೂಕ್ತವಾಗಿರುವುದರ ಜೊತೆಗೆ, ತೆಂಕುತಿಟ್ಟಿನ ಪಾರಂಪರಿಕ ಎಲ್ಲಾ ವೇಷಗಳನ್ನು ತೋರಿಸಲು ಇದರಲ್ಲಿ ಅವಕಾಶವಿದೆ. ಪ್ರತಿಯೊಬ್ಬ ಕಲಾವಿದನೂ ತನ್ನ ಕಲಾಸಾಮರ್ಥ್ಯವನ್ನು ಪ್ರದರ್ಶನದ ಒಟ್ಟಂದಕ್ಕೆ ಬಳಸುವಲ್ಲಿಯೂ ಇದು ಪೂರಕ ಪ್ರಸಂಗ. ಭಾಗವತ ಪಟ್ಲ ಸತೀಶ ಶೆಟ್ಟರ ಹಾಡುಗಾರಿಕೆ ಯಕ್ಷಗಾನ ಪ್ರಿಯರನ್ನು ಮಾತ್ರವಲ್ಲ, ಯಕ್ಷಗಾನ ಅರಿಯದವರನ್ನು ಸಹ ಬೆರಗುಗೊಳಿಸಿದೆ. ಪ್ರಸಂಗದ ಅನೇಕ ಭಾಗಗಳಲ್ಲಿ ಕೇವಲ ಮದ್ದಳೆಯೇ ಹಿಮ್ಮೇಳವಾದುದರಿಂದ, ಮದ್ದಳೆಯ ಮಹತ್ವವನ್ನು ಪ್ರತ್ಯೇಕವಾಗಿ ತೋರಿಸಿಕೊಡುವಲ್ಲಿ ಪದ್ಮನಾಭ ಉಪಾಧ್ಯಾಯರ ಪ್ರಯತ್ನ ಸಫಲವಾಗಿತ್ತು. ಚೆಂಡೆವಾದಕರಾಗಿ ಬೆಳುವಾಯಿ ದೇವಾನಂದ ಭಟ್ ಅವರು ವೃತ್ತಿಪರ ಚೆಂಡೆವಾದಕರಿಗಿಂತ ತಾವೇನೂ ಹಿಂದಿಲ್ಲವೆಂಬುದನ್ನು ಮನದಟ್ಟು ಮಾಡಿಸಿದರು.

ಶ್ರೀಕೃಷ್ಣನಾಗಿ ಚಂದ್ರಶೇಖರ ಧರ್ಮಸ್ಥಳ, ಸಖನಾಗಿ ಅರುಣ್ ಜಾರ್ಕಳ ಇವರ ಜೋಡಿ ಅಭೂತ ಪೂರ್ವವಾಗಿ ಮೆರೆದಿತ್ತು. ಸಖಿಯಾಗಿ ಪ್ರಶಾಂತ ಶೆಟ್ಟಿ ನೆಲ್ಯಾಡಿ ಅವರು ವಿಮರ್ಶಕರ ಒರೆಗಲ್ಲಿಗೆ ಹಚ್ಚಬಹುದಾದ ತಮ್ಮ ಕಲಾವಂತಿಕೆಯ ಪ್ರದರ್ಶನ ಮಾಡಿದರು. ರಾಜವೇಷ, ಪುಂಡುವೇಷಗಳಲ್ಲಿ ಒಳ್ಳೆಯ ಹೆಸರು ಪಡೆಯುತ್ತಿರುವ ಮೋಹನ್ ಬೆಳ್ಳಿಪ್ಪಾಡಿಯವರ ನರಕಾಸುರನನ್ನು ನೋಡಿ ಪ್ರೇಕ್ಷಕರು ಬೆರಗಾದರು. ತೆಂಕುತಿಟ್ಟಿನ ಸಮರ್ಥ ಯುವ ವೇಷಧಾರಿ, ರಾಕೇಶ್ ರೈ ಅವರಿಗೆ ಇದರಲ್ಲಿ ಎರಡು ಪಾತ್ರಗಳಿದ್ದು, ನಾರದ ಮತ್ತು ದೇವೇಂದ್ರನಾಗಿ ಪಾತ್ರೋಚಿತ ಪ್ರಸ್ತುತಿಯ ಮೂಲಕ ತಮ್ಮ ಕಲಾತ್ಮಕತೆಯನ್ನು ತೋರಿಸುವಲ್ಲಿ ಸಫಲರಾದರು. ಸತ್ಯಭಾಮೆಯಾಗಿ, ನಿರ್ದೇಶಕಿ ವಿದ್ಯಾ ಕೊಳ್ಯೂರ್ ಪಾತ್ರವನ್ನು ಮನೋಜ್ಞವಾಗಿ ನಿರ್ವಹಿಸಿ ಪ್ರೇಕ್ಷಕರ ಮೆಚ್ಚುಗೆ ಪಡೆದರು.

ಈ ಬಾರಿಯ ಯಕ್ಷಗಾನ ಪ್ರದರ್ಶನದ ಸಂಪೂರ್ಣ ಪ್ರಾಯೋಜಕತ್ವನ್ನು ಇನ್‌ಫೋಸಿಸ್ ಫೌಂಡೇಶನ್ ವಹಿಸಿದ್ದು ಮಾತ್ರವಲ್ಲ, ಶ್ರೀಮತಿ ಸುಧಾ ಮೂರ್ತಿಯವರು ಸ್ವತಹ ಯಕ್ಷಗಾನವನ್ನು ನೋಡಲು ಬಂದಿದ್ದರಿಂದ ಕಲಾವಿದರಿಗೂ ಎಲ್ಲಿಲ್ಲದ ಹುಮ್ಮಸ್ಸು ಬಂದಿತ್ತು. ಹಾಸ್ಯದ ಸನ್ನಿವೇಷಗಳಲ್ಲಿ ಕನ್ನಡಿಗರ ನಗುವಿನೊಂದಿಗೆ ಕನ್ನಡೇತರರು ಸೇರಿಕೊಳ್ಳುವುದಕ್ಕೆ, ಯಕ್ಷಗಾನದ ಪ್ರದರ್ಶನದ ಜೊತೆಗೇ ಸ್ಟೇಜಿನ ಮೂಲೆಯಲ್ಲಿ ಕಾಣಿಸುತ್ತಿದ್ದ ನೇರ ಸಬ್‌ಟೈಟ್‌ಲ್ ಸಹಾಯಕವಾಗಿತ್ತು.

ಸಭಾಂಗಣದಲ್ಲಿ ಕಿಕ್ಕಿರಿದು ಸೇರಿದ್ದ ಪ್ರೇಕ್ಷಕರಲ್ಲಿ ಕೆಲವರು ಪಾತ್ರಗಳ ಜೊತೆ ತಮ್ಮ ಭಾವಚಿತ್ರವನ್ನು ತೆಗೆಸಿಕೊಂಡರೂ, ಅದಕ್ಕಾಗಿಯೇ ಒಂದು ಗಂಟೆ ಹಿಡಿದುದನ್ನು ನೋಡಿದಾಗ, ಯಕ್ಷಗಾನ ಹೇಗೆ ಜನಾಕರ್ಷಣೆಯನ್ನು ಮಾಡುತ್ತಿದೆ ಎಂಬುದನ್ನು ಊಹಿಸಬಹುದಾಗಿದೆ. 'ಮುಂದಿನ ಬಾರಿಗೆ ನಮ್ಮಲ್ಲಿ ಖಂಡಿತಾ ಯಕ್ಷಗಾನ ಮಾಡಬೇಕು' ಎಂಬ ಬೇಡಿಕೆಗಳನ್ನು ಒಟ್ಟು ಸೇರಿಸಿದಾಗ ಮುಂದಿನ ಬಾರಿಗೆ 10 ಪ್ರದರ್ಶನಗಳಂತೂ ಈಗಾಗಲೇ ಪಕ್ಕಾ ಆಗಿದೆ.

ಲಂಡನ್‌ನ ಸ್ವಾಮಿ ನಾರಾಯಣ ಶಾಲೆಯಲ್ಲಿ ಮಕ್ಕಳಿಗಾಗಿ, ಅಭಿಮನ್ಯು - ಸುಭದ್ರೆಯ ವೀರ-ಕರುಣಾ ರಸದ ಪ್ರಾತ್ಯಕ್ಷಿಕೆ ಈ ಬಾರಿಯ ಲಂಡನ್ ತಿರುಗಾಟದ ಇನ್ನೊಂದು ಯಶಸ್ವೀ ಕಾರ್ಯಕ್ರಮ. ವಿದ್ಯಾ ಕೋಳ್ಯೂರು ಸುಭದ್ರೆಯಾಗಿ ಮತ್ತು ಚಂದ್ರಶೇಖರ ಧರ್ಮಸ್ಥಳ ಅಭಿಮನ್ಯುವಾಗಿ ಪ್ರಸ್ತುತ ಪಡಿಸಿದಾಗ ಶಾಲೆಯ ಪ್ರಿನ್ಸಿಪಾಲರಿಂದ ಶ್ಲಾಘನೆಯ ಮಾತುಗಳೊಂದಿಗೆ ಬಂದ ಉದ್ಗಾರ "ಯು ಹ್ಯಾವ್ ಮೇಡ್ ಮೈ ಡೇ!"

ಒಟ್ಟಿನಲ್ಲಿ, ತೆಂಕುತಿಟ್ಟು ಯಕ್ಷಗಾನದ ಇತಿಹಾಸದಲ್ಲೊಂದು ಸಾಧನೆಯ ಮೆಟ್ಟಲು, ಈ ಬಾರಿಯ ಯಕ್ಷಮಂಜೂಷದ ಲಂಡನ್ ಯಕ್ಷಗಾನ. ಅ

*ಸರವು ಕೃಷ್ಣ ಭಟ್*

## ಪುಸ್ತಕ ಪ್ರಕಟಣೆಗೆ ಸಹಾಯ ಧನ

ಬೆಂಗಳೂರಿನ ಅ.ಸು. ಕೃಷ್ಣರಾವ್ ಸ್ಮಾರಕ ದತ್ತಿ ನಿಧಿಯಿಂದ ಕರ್ನಾಟಕ ಸಂಘ ಮುಂಬಯಿ, ಪುಸ್ತಕ ಪ್ರಕಟಣೆಗಾಗಿ ಕೊಡಮಾಡುವ 10,000/- (ರೂ. ಹತ್ತು ಸಾವಿರ)ಗಳ ಸಹಾಯ ಧನಕ್ಕಾಗಿ ಯೋಗ್ಯ ಲೇಖಕರಿಂದ ಕೃತಿಗಳನ್ನು ಆಹ್ವಾನಿಸಲಾಗಿದೆ.

ಹೊರನಾಡ ಕನ್ನಡಿಗರ ಜೀವನ, ಸಮಸ್ಯೆಗಳಿಗೆ ಸಂಬಂಧಿಸಿದ ಇಲ್ಲವೇ ಕನ್ನಡದ ಖ್ಯಾತ ಕೃತಿಯೊಂದರ ಮರಾಠಿ, ಹಿಂದಿ, ಇಂಗ್ಲಿಷ್ ಅನುವಾದಕ್ಕೆ ಈ ಬಹುಮಾನವನ್ನು ಕೊಡಲಾಗುವುದು. ಮುಖ್ಯವಾಗಿ ಕೃತಿ ಹೊರನಾಡ ಕನ್ನಡ-ಕನ್ನಡಿಗರಿಗೆ ಸಂಬಂಧಿಸಿರಬೇಕು. ಬಹುಮಾನವು ಕವಿತೆ, ಕಥೆ, ಕಾದಂಬರಿ, ನಾಟಕ ಹರಟೆಗಳಂತಹ ಲಲಿತ ಸಾಹಿತ್ಯ ಕೃತಿಗೆ ಅದರಂತೆ ಪಿ.ಎಚ್.ಡಿ. ಪ್ರಬಂಧಗಳಿಗೆ ಸಲ್ಲುವುದಿಲ್ಲ. ಬದಲಿಗೆ ವಿಚಾರ / ವಿಮರ್ಶೆ ಸಾಹಿತ್ಯಕ್ಕೆ ಮಾತ್ರ ಸಲ್ಲುವುದು.

ಬಹುಮಾನವು ಲೇಖಕ, ಸಂಶೋಧಕ, ಅನುವಾದಕರಿಗಾಗಿ ಇದೆ. ಪ್ರಕಾಶಕರಿಗಾಗಿ ಅಲ್ಲ. ಪುಸ್ತಕವು ಹಸ್ತಪ್ರತಿ ಸ್ವರೂಪದಲ್ಲಿ ಇಲ್ಲವೇ ಡಿ.ಟಿ.ಪಿ. ಕಂಪೋಸ್ಡ್ ಅಥವಾ ಟೈಪ್ ಮಾಡಿದ ಸ್ವರೂಪದಲ್ಲಿರಬೇಕು. ಹಸ್ತಪ್ರತಿಯ ಕನಿಷ್ಠ 150 ಪುಟಗಳಷ್ಟಿರಬೇಕು. ಹಸ್ತಪ್ರತಿಯನ್ನು ಕಳುಹಿಸುವ ಮುಂಚೆ ಒಂದೆರಡು ಪುಟಗಳಲ್ಲಿ ಅದರ ವಿಷಯದ ಸಾರವನ್ನು ಈ ಕೆಳಗಿನ ವಿಳಾಸಕ್ಕೆ ಕಳುಹಿಸುವಂತೆ ಸೂಚಿಸಲಾಗಿದೆ. ಹೆಚ್ಚಿನ ಮಾಹಿತಿಗಾಗಿ ಗೌ.ಪ್ರ. ಕಾರ್ಯದರ್ಶಿಯವರನ್ನು ಸಂಪರ್ಕಿಸಬಹುದು. ಹಸ್ತಪ್ರತಿಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ 30.04.2015.

Hon. Secretary
Karnataka Sangha, Dr. M. Vishveshvaraya Smarak Mandir,
Chatrapati Shivaji Maharaj Marg, Off. T.H. Kataria Marg
Near Matunga Road Station (W), Mumbai-400016
Tel : 2437 7022 / 2437 9645



## ಸಂಘದ ಸದಸ್ಯ ಕೆ.ಎಸ್. ಗಣಪತಿ ನಿಧನ

ದೆಹಲಿ ಕರ್ನಾಟಕ ಸಂಘದ ಆಜೀವ ಸದಸ್ಯರಾದ ಶ್ರೀ ಕೆ.ಎಸ್. ಗಣಪತಿ ಅವರು ಕೊಡಗಿನ ಕುಶಾಲನಗರದಲ್ಲಿ ಮಾರ್ಚ್ 1ರಂದು ಸ್ವರ್ಗಸ್ಥರಾದರು. ಕೊಡಗಿನ ಕುಂಬಳದಾಳು ಗ್ರಾಮದಲ್ಲಿ ಜನಿಸಿದ ಇವರು ತಮ್ಮ ವಿದ್ಯಾಭ್ಯಾಸವನ್ನು ಮುಗಿಸಿದ ನಂತರ ಆಗಿನ ಕೇಂದ್ರದ ಮಂತ್ರಿಗಳಾದ ಶ್ರೀ ಸಿ.ಎಂ. ಪೂಣಚ್ಚನವರ ಜೊತೆಯಲ್ಲಿ ದೆಹಲಿಗೆ 1960ರಲ್ಲಿ ಬಂದರು. ಸುಮಾರು 43 ವರ್ಷ ಮಿನಿಸ್ಟ್ರಿ ಆಫ್ ಕಾಮರ್ಸ್‌ನಲ್ಲಿ ಕೆಲಸ ಮಾಡಿ 2000ದಲ್ಲಿ ಸೇವೆಯಿಂದ ನಿವೃತ್ತಿಯಾದರು ಅವರು ಪತ್ನಿ, ಓರ್ವ ಮಗಳು ಮತ್ತು ಇಬ್ಬರು ಗಂಡು ಮಕ್ಕಳನ್ನು ಅಗಲಿರುತ್ತಾರೆ. 1978ರಲ್ಲಿ ದೆಹಲಿ ಒಕ್ಕಲಿಗ ಗೌಡ ಸಂಘದ ಹಬ್ಬನ್ನು ಇವರ ಮನೆಯಲ್ಲಿ ಆಚರಿಸಲಾಗಿತ್ತು.

ಅವರ ಅಂತ್ಯಕ್ರಿಯೆಯಲ್ಲಿ ದೆಹಲಿ ಕರ್ನಾಟಕ ಸಂಘದ ಕಾರ್ಯಕಾರಿ ಸಮಿತಿಯ ಸದಸ್ಯ ಮತ್ತು ದೆಹಲಿ ಒಕ್ಕಲಿಗ ಗೌಡ ಸಂಘ ಉಪಾಧ್ಯಕ್ಷರಾದ ಶ್ರೀ ಟಿ.ಪಿ. ಬೆಳ್ಳಿಯಪ್ಪನವರು ಭಾಗವಹಿಸಿದ್ದರು. ಅ

*ಗಣೇಶ್ ಪಿ.ಎಂ.*

# ದೆಹಲಿಯಲ್ಲಿ ರಾಜವೀರ ಮದಕರಿ ನಾಯಕ ಉತ್ಸವ

ದೆಹಲಿಯ ರಾಜವೀರ ಮದಕರಿ ನಾಯಕರ ಸಂಘವು ರಾಜವೀರ ಮದಕರಿಯ ಬಗ್ಗೆ ಉಪನ್ಯಾಸ, ಸಾಧಕರಿಗೆ ಸನ್ಮಾನ, ನಾಟಕ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳೊಂದಿಗೆ ರಾಜವೀರ ಮದಕರಿ ನಾಯಕರ ಉತ್ಸವವನ್ನು ದೆಹಲಿ ಕರ್ನಾಟಕ ಸಂಘದ ಸಭಾಂಗಣದಲ್ಲಿ ಇದೇ ಮಾರ್ಚ್ 1ರಂದು ನಡೆಸಿತು.

ಸಮಾರಂಭದ ಅಧ್ಯಕ್ಷಸ್ಥಾನವನ್ನು ವಹಿಸಿದ ಕರ್ನಾಟಕ ಸರ್ಕಾರದ ಸಣ್ಣ ಕೈಗಾರಿಕಾ ಸಚಿವರಾದ ಶ್ರೀ ಸತೀಶ್ ಎಲ್. ಜಾರಕಿಹೊಳಿ ಅವರು ಮಾತನಾಡುತ್ತಾ "ನಮ್ಮ ಸಮುದಾಯ ಸರ್ವತೋಮುಖ ಅಭಿವೃದ್ಧಿಯನ್ನು ಕಾಣಬೇಕಾದರೆ ಶಿಕ್ಷಣಕ್ಕೆ ಹೆಚ್ಚು ಆದ್ಯತೆಯನ್ನು ಕೊಡಬೇಕು. ಮೌಢ್ಯತೆ ಮತ್ತು ದುಶ್ಚಟಗಳಿಂದ ದೂರವಿದ್ದಲ್ಲಿ ನಮ್ಮ ಸಮುದಾಯದ ಅಭಿವೃದ್ಧಿ ಸಾಧ್ಯ" ಎಂದು ಹೇಳಿದರು.

ಶಾಸಕರಾದ ಶ್ರೀ ಕೆ.ಎನ್. ರಾಜಣ್ಣ ಅವರು ರಾಜವೀರ ಮದಕರಿಯ ಭಾವಚಿತ್ರವನ್ನು ಅನಾವರಣಗೊಳಿಸಿ, ವಿದ್ಯುಕ್ತವಾಗಿ ಜ್ಯೋತಿ ಬೆಳಗಿಸಿ ಸಮಾರಂಭವನ್ನು ಉದ್ಘಾಟಿಸಿ ಸಮುದಾಯಕ್ಕೆ ಶುಭ ಕೋರಿದರು.

ದಾವಣಗೆರೆ ಜಿಲ್ಲೆಯ ರಾಜನಹಳ್ಳಿಯ ವಾಲ್ಮೀಕಿ ಗುರುಪೀಠ ಮಹಾಸಂಸ್ಥಾನದ ಶ್ರೀ ಪ್ರಸನ್ನಾನಂದ ಮಹಾಸ್ವಾಮೀಜಿ ಅವರು, ತುಮಕೂರು ಜಿಲ್ಲೆಯ ಶಿರಾ ತಾಲ್ಲೂಕಿನ ಭಗವಾನ್ ವಾಲ್ಮೀಕಿ ಸಂಸ್ಥಾನ ಮಠ ಶಿಡ್ಲೆಕೋಣದ ಶ್ರೀ ವಾಲ್ಮೀಕಿ ಸಂಜಯ್‌ಕುಮಾರ ಸ್ವಾಮೀಜಿ ಅವರು, ನವದೆಹಲಿ ಭಗವಾನ್ ವಾಲ್ಮೀಕಿ ಮಂದಿರದ ಶ್ರೀ ವಿದ್ಯಾರ್ಥಿ ಸ್ವಾಮೀಜಿಗಳು ಆಶೀರ್ವಚನ ನೀಡಿದರು.

ಭಾರತೀಯ ಅಧ್ಯಯನದ ಅಮೆರಿಕ ಸಂಸ್ಥೆಯ ನಿರ್ದೇಶಕರಾದ ಡಾ. ಪುರುಷೋತ್ತಮ ಬಿಳಿಮಲೆ ಅವರು ಮಾತನಾಡುತ್ತಾ–"ವಾಲ್ಮೀಕಿ ಸಮುದಾಯದ ಇತಿಹಾಸವನ್ನು ತೆರೆಮರೆಯಲ್ಲಿಡಲಾಗಿದೆ ಮತ್ತು ದಾಖಲಾಗಿರುವ ವಿಷಯಗಳು ಸತ್ಯಕ್ಕೆ ದೂರವುಳಿದಿವೆ. ತಿರುಚಿ ಬರೆದಿರುವ ನಮ್ಮ ಇತಿಹಾಸವನ್ನು ಮರುದಾಖಲಿಸುವ ಅವಶ್ಯಕತೆಯಿದೆ" ಎಂದು ನುಡಿದರು. ಮಧ್ಯಪ್ರದೇಶದ ಇಂದಿರಾಗಾಂಧಿ ರಾಷ್ಟ್ರೀಯ ಆದಿವಾಸಿ ವಿಶ್ವವಿದ್ಯಾಲಯದ ಕುಲಪತಿ ಡಾ. ತೇಜಸ್ವಿ ವಿ. ಕಟ್ಟಿಮನಿ ಅವರು ಮಾತಾಡಿದರು.

ದೆಹಲಿ ಸರ್ಕಾರದ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಸಚಿವರಾದ ಶ್ರೀ ಸಂದೀಪ್ ಕುಮಾರ್ ಅವರು ಮಹರ್ಷಿ ವಾಲ್ಮೀಕಿ ದಿವ್ಯ ದರ್ಶನ ಕೃತಿಯನ್ನು ಬಿಡುಗಡೆ ಮಾಡಿದರು. ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷರಾದ ಶ್ರೀ ವಸಂತ ಶೆಟ್ಟಿ ಬೆಳ್ಳಾರೆ ಅವರು ಮಾತನಾಡಿದರು.

ಮುಖ್ಯ ಅತಿಥಿಯಾಗಿದ್ದ ಬೆಂಗಳೂರಿನ ವಿಧಾನ ಪರಿಷತ್ ಸದಸ್ಯ ಶ್ರೀ ವಿ.ಎಸ್. ಉಗ್ರಪ್ಪ ಅವರು ಮಾತನಾಡುತ್ತಾ ಪ್ರಜಾವತ್ಸಲರೂ ಪರಂಪರೆಗೆ ಧಕ್ಕೆಯುಂಟಾಗದಂತೆ ಪಕ್ಷಪಾತರಹಿತ ರಾಜನೀತಿಯನ್ನು ರೂಪಿಸಿದವರು, ನಿಪುಣರೂ, ಕೃಷಿ, ವಾಣಿಜ್ಯ ಇತ್ಯಾದಿಗಳ ಪೋಷಕರು, ಸಂರಕ್ಷಕರಾಗಿ, ಕೋಟೆ–ಕೊತ್ತಲಗಳು, ದೇವಾಲಯಗಳು, ಕೆರೆ, ಹಳ್ಳ–ಕೊಳ್ಳಗಳನ್ನು ಕಟ್ಟಿ ಆಳ್ವಿಕೆ ನಡೆಸಿದವರು ಯಾರಾದರೂ ಇದ್ದರೆ ಅದು ಮದಕರಿ ವಂಶಸ್ಥರು. ಸಾಮಾಜಿಕ, ಸಾಂಸ್ಕೃತಿಕ, ಧಾರ್ಮಿಕ, ಆರ್ಥಿಕವಾಗಿ ಪ್ರಬಲರಾಗಿದ್ದು, ಸಹಕಾರ, ಸೌಹಾರ್ದತೆ, ಸಹನೆ, ಮಾನವತೆಯಿಂದ ಆಳ್ವಿಕೆ ನಡೆಸಿದ್ದಾರೆಂದರೆ ಅವರು ಮದಕರಿ ವಂಶಸ್ಥರಾಗಿದ್ದರು ಎಂದರು.





ರಾಜವೀರ ಮದಕರಿ ನಾಯಕನನ್ನು ಕುರಿತು ಡಾ. ಅನಸೂಯ ರುದ್ರಪ್ಪನವರು ಉಪನ್ಯಾಸ ಮಾಡುತ್ತಾ "ಭಾವೋದ್ವೇಗಗಳಿಗೆ ಒಳಮಾಡುವ, ರೋಮ ರೋಮಗಳಲ್ಲೂ ಸಂಚಲನವನ್ನುಂಟು ಮಾಡುವ ವೀರಮದಕರಿ ನಾಯಕರ ವ್ಯಕ್ತಿತ್ವ, ಅವರಲ್ಲಿದ್ದ ಮಾನವೀಯತೆ, ವೀರನೆನಿಸುವ ಲಕ್ಷಣಗಳು, ಮಹತ್ವಪೂರ್ಣವಾದವು. ಆತ ಅನುಸರಿಸುತ್ತಿದ್ದ ಧರ್ಮ, ನ್ಯಾಯ, ನಿಷ್ಠೆ, ನೀತಿಗಳು ಅಮೋಘವಾದವು. ರಾಷ್ಟ್ರ, ರಾಜ್ಯ, ಮಹಿಳೆಯರ ರಕ್ಷಣೆಗಾಗಿ, ಸ್ವಾತಂತ್ರ್ಯಕ್ಕಾಗಿ, ದುಷ್ಟರ ನಿಗ್ರಹಕ್ಕಾಗಿ, ಅನ್ಯಾಯದ ವಿರುದ್ಧ ಸಿಡಿದೇಳುವ ಸಿಂಹದ ಮರಿಗಳಾಗಿ, ಖಡ್ಗದಾರಿಗಳಾಗಿ, ಕಂಕಣಬದ್ಧರಾಗಿ ಮಧೋನ್ಮತ್ತ ಶತ್ರುಗಳ ಪಾಳೆಯಗಳನ್ನು ಹೊಕ್ಕು ಸಿಕ್ಕಿಸಿಕ್ಕಿದವರ ರುಂಡ–ಮುಂಡಗಳನ್ನು ಚೆಂಡಾಡುತ್ತಾ, ಕಂಡಕಂಡಲ್ಲಿ ತುಂಡರಿಸುತ್ತಾ, ವೀರವೇಶದಿಂದ ಪ್ರಾಣವನ್ನು ಲೆಕ್ಕಿಸದೆ ಹೋರಾಡಿದವರು, ಚಿತ್ರದುರ್ಗದ ಪಾಳೆಯಗಾರರು" ಎಂದು ನುಡಿದರು.

ಚಿತ್ರದುರ್ಗದ ಜಿಲ್ಲಾ ಮದಕರಿ ನಾಯಕ ವಿದ್ಯಾಸಂಸ್ಥೆಯ ಸಂಸ್ಥಾಪಕರಾದ ಶ್ರೀ ಡಿ. ಬೋರಪ್ಪನವರನ್ನು ಸನ್ಮಾನಿಸಲಾಯಿತು. ಅವರು ಈ ಸಂದರ್ಭದಲ್ಲಿ ಮಾತನಾಡುತ್ತಾ ರಾಷ್ಟ್ರ, ರಾಜ್ಯಕ್ಕಾಗಿ ದುಡಿದ ವೀರಮದಕರಿಯ ಭಾವಚಿತ್ರವನ್ನು ದೆಹಲಿಯಲ್ಲಿ ಸ್ಥಾಪಿಸಬೇಕೆಂದರು.

ನವದೆಹಲಿಯ ಕರ್ನಾಟಕ ಭವನದ ವ್ಯವಸ್ಥಾಪಕರಾಗಿ ಸೇವೆ ಸಲ್ಲಿಸುತ್ತಿರುವ ಶ್ರೀ ಬಿ.ಆರ್. ಮಹಾಲಿಂಗಪ್ಪ ಅವರನ್ನು ಸನ್ಮಾನಿಸಲಾಯಿತು.

ರಾಯಚೂರಿನ ಲೋಕಸಭಾ ಸದಸ್ಯರಾದ ಶ್ರೀ ಬಿ.ವಿ. ನಾಯಕ, ಕರ್ನಾಟಕ ವಾಲ್ಮೀಕಿ ಫೌಂಡೇಶನ್ ಅಧ್ಯಕ್ಷರಾದ ಶ್ರೀ ಶಿವಕುಮಾರ್, ವಾಲ್ಮೀಕಿ ಫೌಂಡೇಶನ್ ಕಾರ್ಯಾಧ್ಯಕ್ಷರಾದ ಶ್ರೀ ಸಿ. ಆಂಜನಪ್ಪ, ವಾಲ್ಮೀಕಿ ನಾಯಕ ಮಹಾಸಭಾ ಉಪಾಧ್ಯಕ್ಷರಾದ ಶ್ರೀ ಹೆಚ್.ವಿ. ಶಿವಶಂಕರ್, ವಾಲ್ಮೀಕಿ ಫೌಂಡೇಶನ್ ಕಾರ್ಯದರ್ಶಿಗಳಾದ ಶ್ರೀ ಬೆಳ್ಳಿ ಗಂಗಾಧರ್, ಎಸ್.ಟಿ.ಮೋರ್ಚಾದ ರಾಜ್ಯ ಬಿಜೆಪಿ ಉಪಾಧ್ಯಕ್ಷ ಡಾ. ಬಿ. ಅರುಣ್‌ಕುಮಾರ್, ಬೆಂಗಳೂರು ಎಜುಕೇಷನ್ ಟ್ರಸ್ಟ್ ಆಡಳಿತಾಧಿಕಾರಿ ಶ್ರೀ ಕೆ.ಆರ್. ಕೃಷ್ಣಂರಾಜು, ಸಮಾಜ ಸೇವಕರಾದ ಶ್ರೀ ಜಿ.ಕೆ. ಮಂಜಪ್ಪ ಕಲ್ಮನೆ, ವಾಲ್ಮೀಕಿ ಸೇವಾ ಟ್ರಸ್ಟ್‌ನ ಅಧ್ಯಕ್ಷ ಶ್ರೀ ರಮೇಶ್ ಉತ್ತರಹಳ್ಳಿ, ಬಳ್ಳಾರಿ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ಶ್ರೀರಾಮಚಂದ್ರರಾವ್‌ಜಿ, ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡ ನಿಗಮದ ಅಧ್ಯಕ್ಷ ಶ್ರೀ ಎಸ್.ಸಿ. ಬಸವರಾಜು, ಎಂಸಿಎ ಮಾರ್ಕೆಟಿಂಗ್ ನಿಗಮದ ಅಧ್ಯಕ್ಷ ಶ್ರೀ ಎಲ್.ಎನ್. ಮೂರ್ತಿ, ಜವಳಿ ನಿಗಮದ ಉಪಾಧ್ಯಕ್ಷ ಶ್ರೀಮತಿ ಕಮಲಮ್ಮ ಮರಿಸ್ವಾಮಿ, ಅರಣ್ಯಾಭಿವೃದ್ಧಿ ಕೈಗಾರಿಕಾ ನಿಗಮದ ಅಧ್ಯಕ್ಷ ಶ್ರೀ ಲೋಕೇಶ್ ನಾಯಕ್, ರಾಷ್ಟ್ರಪ್ರಶಸ್ತಿ ಪದಕ ಪುರಸ್ಕೃತ ಸಾಹಿತಿಗಳಾದ ಶ್ರೀ ಹರ್ತಿಕೋಟೆ ವೀರೇಂದ್ರ ಸಿಂಹ, ಹ್ಯಾಟ್ರಿಕ್ ಡೈರೆಕ್ಟರ್ ನಾಗೇಂದ್ರ ಮಾಗಡಿ, ಮಿತ್ರ ಪಾಕ್ಷಿಕ ಪತ್ರಿಕೆಯ ಸಂಪಾದಕರಾದ ಶ್ರೀ ಆಲ್ಲೂರು ಶಿವರಾಜು, ಡಾ. ಕಲ್ಮೇಶ್ ಹಾವೇರಿಪೇಟ್ ಮೊದಲಾದವರನ್ನು ಸನ್ಮಾನಿಸಲಾಯಿತು.

ನಾಗೇಂದ್ರ ಮಾಗಡಿ ಅವರಿಂದ ಸಂಸ್ಥಾಪಿತಗೊಂಡ ಬೆಂಗಳೂರಿನ ಶ್ರೀ ರಾಜವೀರ ಮದಕರಿ ನಾಯಕ ಸಾಂಸ್ಕೃತಿಕ ಕಲಾ ಸಂಘದಿಂದ ಶ್ರೀ ಗುರು ಮಾಗಡಿ ಮತ್ತು ಸಂಗಡಿಗರಿಂದ 'ನಾಡಕಟ್ಟಿದ ನಾಯಕ ನಕ್ಷತ್ರಗಳು' ಹೋರಾಟದ ಗೀತೆಗೆ ನೃತ್ಯಪ್ರದರ್ಶನ ನಡೆಯಿತು. ಚಿತ್ರದುರ್ಗದ ಕಾಟಂಲಿಂಗೇಶ್ವರ ನಾಟಕ ಸಂಘದಿಂದ ಪಿ. ತಿಪ್ಪೇಸ್ವಾಮಿ ಅವರ ನಿರ್ದೇಶನದೊಂದಿಗೆ 'ರಾಜವೀರ ಮದಕರಿನಾಯಕನ ಐತಿಹಾಸಿಕ ನಾಟಕ' ನಡೆಯಿತು. ದೆಹಲಿಯ ಸ್ಥಳೀಯ ಕಲಾವಿದರಿಂದ ಸಾಂಸ್ಕೃತಿಕ ಕಾರ್ಯಕ್ರಮ ಮತ್ತು ನಾಡಗೀತೆಯು ನಡೆಯಿತು.

ಮದಕರಿ ನಾಯಕರ ಸಂಘದ ಅಧ್ಯಕ್ಷ ಶ್ರೀ ಬಿ.ಕೆ. ಬಸವರಾಜು ಅವರು ಪ್ರಾಸ್ತವಿಕ ನುಡಿಗಳನ್ನಾಡುತ್ತಾ ತಾಯಿ ಮಡಿಲು, ತಾಯಿ ನುಡಿ, ತಾಯಿ ನಾಡಿನ ಬಗೆ ಅಭಿಮಾನ ನಮ್ಮ ಉಸಿರಿನಷ್ಟು ಸಹಜ ಮತ್ತು ನಮ್ಮ ಜೀವನದಷ್ಟೇ ಮಹತ್ವದ್ದು. ಅಂತಹ ನಾಡಿನ ಸ್ವಾತಂತ್ರ್ಯಕ್ಕಾಗಿ, ನಾಡು–ನುಡಿಗಾಗಿ ಪ್ರಾಣವನ್ನು ಲೆಕ್ಕಿಸದೆ ವೀರಾವೇಶದಿಂದ ಹೋರಾಡಿದ ವೀರ ಮದಕರಿನಾಯಕನ ಉತ್ಸವವನ್ನು ಆಚರಿಸಲು ನಮಗೆ ಹೆಮ್ಮೆ ಎನಿಸುತ್ತದೆ ಎಂದರು. ಸಂಘದ ಕಾರ್ಯದರ್ಶಿ ಆರ್. ಮುರಳಿಧರ ನಾಯಕ ಸ್ವಾಗತಿಸಿದರು. ಅ

**ಅಭಿಮತ ವರದಿ**

ಅನಿಸಿಕೆ

# ಅನುಭಾವವೆನಿಸಿದ ಸಂಘದ ಮಾರ್ಚ್ ತಿಂಗಳ ಕಾರ್ಯಕ್ರಮಗಳು

ದೆಹಲಿ ಕರ್ನಾಟಕ ಸಂಘ ನಡೆಸುತ್ತಿರುವ ವೈವಿಧ್ಯಮಯ ಕಾರ್ಯಕ್ರಮಗಳ ಸಾಲಿಗೆ ಇದೇ ಮಾರ್ಚ್ 14 ಮತ್ತು 15ರಂದು ನಡೆದ ಎರಡು ಕಾರ್ಯಕ್ರಮಗಳು ಸಾಕ್ಷಿ. "ಸರಳ ವಾಸ್ತು" ಕಾರ್ಯಕ್ರಮದಲ್ಲಿ ಶ್ರಮದಿಂದ ಕಟ್ಟಿದ ಮನೆಯನ್ನು ಒಡೆಯದೆ, ಅಲ್ಲಿಂದಿಲ್ಲಿಗೆ, ಇಲ್ಲಿಂದಲ್ಲಿಗೆ ಗೋಡೆಗಳನ್ನು ಬದಲಾಯಿಸದೆ, ಮನೆಯ ಸಮಸ್ಯೆಗಳನ್ನು ಪರಿಹರಿಸಿಕೊಳ್ಳುವ ವಿವರ ದೊರೆಯಿತು. ಡಾ. ಚಂದ್ರಶೇಖರ್ ಗುರೂಜಿ ಅವರು ನಂಬಿಕೆ ಹಾಗೂ ವಿಶ್ವಾಸದಿಂದ ವಿವರಿಸಿದ ಕಾರ್ಯವಿಧಾನದಿಂದ ಸರಳ ವಾಸ್ತುವಿನ ಉಪಯುಕ್ತತೆಯನು ಪಡೆಯಬೇಕೆಂಬ ಇಚ್ಛೆ ಮೂಡಿಬಂತು.

ಕುವೆಂಪು ಅವರ ಬಗ್ಗೆ ಸಮಗ್ರವಾಗಿ ಕ್ರೋಢೀಕರಿಸಿರುವ "ದೃಶ್ಯಚಿತ್ರ ಸರಮಾಲೆ", ನಮ್ಮನ್ನು ಮತ್ತೊಂದು ಲೋಕಕ್ಕೆ ಕರೆದೊಯ್ದು ಮೇಲೆ, ಅಂತಹ ಚೈತನ್ಯವನ್ನು ಪಡೆದ ನಾವೇ ಧನ್ಯವೆನಿಸಿತು. ಇಂತಹ ಚೈತನ್ಯದ ಪ್ರತಿಷ್ಠಾನದ ಪುರಸ್ಕಾರಕ್ಕೆ ಪಾತ್ರರಾದ ಹಿಂದಿ ಭಾಷೆಯ ಪ್ರಸಿದ್ಧ ಸಾಹಿತಿ ಪ್ರೊ. ನಾಮವರ್ ಸಿಂಗ್ ಅವರ ಮಾತುಗಳು ಬಹಳ ಅರ್ಥಗರ್ಭಿತವಾಗಿದ್ದವು.

ಲಾಸ್ಯವರ್ಧನ ಟ್ರಸ್ಟ್ ಅವರಿಂದ ಮೂಡಿ ಬಂದ ನೃತ್ಯರೂಪಕ ಮನಸಿಗೆ ಮುದನೀಡಿತು. ಇನ್ನು ಸಂಗೀತಕ್ಕೆ ತಲೆದೂಗದ ಮನವಿಲ್ಲ ಎಂಬ ಮಾತನ್ನು ನಿಜವಾಗಿಸಿದ ರಾಮಚಂದ್ರ ಜಿ. ಹಡಪದ್ ಅವರ ಕಂಠಸಿರಿ ಕುಳಿತ ಜಾಗವನ್ನು ಮರೆಸಿತು. ಕುಳಿತಲ್ಲೆ ಕುಣಿಯಲಾರಂಭಿಸಿತು ಎಲ್ಲರ ದೇಹ. ಲೇಖನೀಯ ವೈಖರಿಯನು ಕಂಠ ಮಾಧುರ್ಯದಿಂದ ಬಂಧಿಸಿ ಕೇಳುವವರನ್ನು ಬೇಹೋಷ್ ಮಾಡಿದ ಹಡಪದ್ ಅವರಿಗೆ ನಮ್ಮ ಹೃದಯಪೂರ್ವಕ ನಮನಗಳು.

ಆದರೆ, ಅವರ ತೂಕಕ್ಕೆ ಸಮನಾದ ಸಮಯವಿರಲಿಲ್ಲ. ಅದನರಿತ ಸಂಘದ ಕಾರ್ಯದರ್ಶಿ ಶ್ರೀ ಸಿ.ಎಂ. ನಾಗರಾಜ್ ಅವರು ಮತ್ತೆ ಹಡಪದ್ ಅವರ ಗಾನಸಿರಿಯನು ಸವಿಯುವ ಅವಕಾಶ ಮಾಡಿಕೊಡತ್ತಾರೆಂದು ವಚನವಿತ್ತಿದ್ದಾರೆ. ಅವರಿಗೆ ಮತ್ತು ಸಂಘದ ಅಧ್ಯಕ್ಷ ಶ್ರೀ ವಸಂತ ಶೆಟ್ಟಿ ಬೆಳ್ಳಾರೆಯವರಿಗೆ ಇಂತಹ ಅದ್ಭುತ ಅವಕಾಶ ಕೊಟ್ಟಿದ್ದಕ್ಕೆ ಬಹಳ ವಂದನೆಗಳು. ಮತ್ತೆ ರಾಷ್ಟ್ರಕವಿ ಕುವೆಂಪು ಪ್ರತಿಷ್ಠಾನದ ಕಾರ್ಯದರ್ಶಿ ಶ್ರೀ ಕಡಿದಾಳ್ ಪ್ರಕಾಶ್ ಮತ್ತು ಶ್ರೀ ಪುರುಷೋತ್ತಮ ಬಿಳಿಮಲೆಯವರಿಗೆ ನಮ್ಮ ಅನಂತಾನಂತ ವಂದನೆಗಳು. ಅ

*ನರೇಂದ್ರ ಎ.*

ಅಭಿನಂದನೆ



ಕರ್ನಾಟಕದಿಂದ ದೆಹಲಿವರೆಗೆ ಸೈಕಲ್‌ನಲ್ಲಿ ಪಯಣಿಸಿದ ರೋಟರಿ ಇಂಡಿಯಾ "ಲಿಟರೆಸಿ ಮಿಶನ್" ಯೋಜನೆಯಡಿಯಲ್ಲಿ 2017ರ ಒಳಗೆ ಭಾರತದಲ್ಲಿ ಸಂಪೂರ್ಣ ಸಾಕ್ಷರತೆಗಾಗಿ ಜಾಗೃತಿ ಮೂಡಿಸುವಂತಹ ಕೆಲಸ ಮಾಡುತ್ತಿರುವ ರೋಶನ್ ಬಿ.ಎನ್. ಅವರನ್ನು ದೆಹಲಿ ಕರ್ನಾಟಕ ಸಂಘದ ವತಿಯಿಂದ ಸಂಘದ ಅಧ್ಯಕ್ಷ ಶ್ರೀ ವಸಂತ ಶೆಟ್ಟಿ ಬೆಳ್ಳಾರೆ ಅವರು ಅಭಿನಂದಿಸಿದರು.



ದೆಹಲಿಯಿಂದ ವರ್ಗಾವಣೆಗೊಂಡು ಗುವಾಹಟಿಗೆ ಹೋಗುತ್ತಿರುವ ಸಂಘದ ಸದಸ್ಯರಾಗಿರುವ ಇಂಡಿಯನ್ ಏರ್‌ಫೋರ್ಸ್‌ನ ಶ್ರೀ ಸುಜಿತ್ ಶೆಟ್ಟಿ ಅವರನ್ನು ಸಂಘದ ಅಧ್ಯಕ್ಷ ಶ್ರೀ ವಸಂತ ಶೆಟ್ಟಿ ಬೆಳ್ಳಾರೆ ಅವರು ಅಭಿನಂದಿಸಿ ಬೀಳ್ಕೊಟ್ಟರು. ಅ

*ಅಭಿಮತ ವರದಿ*

# ದೆಹಲಿ ಒಕ್ಕಲಿಗ ಗೌಡ ಸಮಾಜದ ವನವಿಹಾರ

ಮಾರ್ಚ್ 13ರಂದು ದೆಹಲಿ ಒಕ್ಕಲಿಗ ಗೌಡ ಸಂಘವು ಪಿಕ್‌ನಿಕ್ ಏರ್ಪಡಿಸಿತ್ತು. ಮಕ್ಕಳಿಗೆ ಆಟೋಟವನ್ನು ಆಯೋಜಿಸಲಾಗಿತ್ತು ಮತ್ತು ನೂತನ ಸದಸ್ಯರುಗಳನ್ನು ಸಭೆಗೆ ಪರಿಚಯಿಸಲಾಯಿತು. ಅದೇ ಸಂದರ್ಭದಲ್ಲಿ ನೂತನ ಕಾರ್ಯಕಾರಿ ಸಮಿತಿಯನ್ನು ಆರಿಸಲಾಯಿತು.

ಅಧ್ಯಕ್ಷರಾಗಿ–ಶ್ರೀ ಕೆ.ಎಸ್. ಸೋಮಶೇಖರ್, ಉಪಾಧ್ಯಕ್ಷರಾಗಿ–ಶ್ರೀಮತಿ ಎಸ್.ಸಿ. ಹೇಮಲತ, ಶ್ರೀ ಟಿ.ಪಿ. ಬೆಳ್ಳಿಯಪ್ಪ, ಕಾರ್ಯದರ್ಶಿ–ಶ್ರೀ ಕೆ. ನಾಗರಾಜ್, ಜಂಟಿ ಕಾರ್ಯದರ್ಶಿ–ಶ್ರೀ ಗಿರೀಶ್ ಎಸ್., ಶ್ರೀ ಮೋಹನ್ ಕುಮಾರ್, ಖಜಾಂಚಿಯಾಗಿ ಶ್ರೀಮತಿ ಭಾರತಿ ಜಿ.ಎಂ., ಸದಸ್ಯರುಗಳಾಗಿ–ಶ್ರೀ ಅರುಣ್‌ಕುಮಾರ್, ಶ್ರೀ ಹನುಮೇಗೌಡ, ಶ್ರೀ ಹರೀಶ್ ಕೆ.ಸಿ., ಶ್ರೀ ಮಹೇಶ್ ಟಿ.ಡಿ., ಶ್ರೀ ತೀರ್ಥ ಎಂ.ಎಂ., ಶ್ರೀ ವಸಂತಕುಮಾರ್ ಎಂ.ಬಿ., ಶ್ರೀಮತಿ ಚೈತ್ರಾ ಸುರೇಶ್, ಶ್ರೀಮತಿ ಗಿರಿಜಾ ಶ್ರೀನಿವಾಸ್, ಡಾ. ವಿ.ಆರ್. ಗುಡ್ಡೇಗೌಡ ಮತ್ತು ಶ್ರೀ ಎನ್.ಎ. ಮಾಧವ ಅವರನ್ನು ಆರಿಸಲಾಯಿತು.

ವನ ಭೋಜನದ ನಂತರ ಆಟೋಟಗಳಲ್ಲಿ ವಿಜೇತರಾದ ಮಕ್ಕಳಿಗೆ ನೂತನ ಅಧ್ಯಕ್ಷರಾದ ಶ್ರೀ ಸೋಮಶೇಖರ್ ಅವರು ಬಹುಮಾನಗಳನ್ನು ವಿತರಿಸಿದರು. ಅ

*ಎಸ್.ಸಿ. ಹೇಮಲತ*

# ಜನಕಪುರಿ ಕನ್ನಡ ಕೂಟದ ರಾಮನವಮಿ ಉತ್ಸವ



ಜನಕಪುರಿ ಕನ್ನಡ ಕೂಟವು ರಾಮನವಮಿ ಉತ್ಸವವನ್ನು ಜನಕಪುರಿಯ ಶ್ರೀರಾಮ ಮಂದಿರದಲ್ಲಿ ಮಾರ್ಚ್ 29ರಂದು ಹಮ್ಮಿಕೊಂಡಿತ್ತು. ಈ ಕಾರ್ಯಕ್ರಮದಲ್ಲಿ ಕೂಟದ ವಿವಿಧ ಕುಟುಂಬಗಳ ಸದಸ್ಯರು ಭಾಗವಹಿಸಿದರು. ವಚನಗಾಯನ ಮತ್ತು ಶ್ರೀ ರಾಮಪೂಜೆಯನ್ನು ಶ್ರೀ ಎಚ್.ಎನ್.ಎಸ್. ರಾವ್ ಅವರು ಶ್ರೀಮತಿ ಮೀರಾ ನಾಡಿಗ್ ಅವರ ಉಪಸ್ಥಿತಿಯಲ್ಲಿ ನೆರವೇರಿಸಿದರು. ಅ

*ಗಂಗಾಧರ*

# ಐ. ರಾಮಮೋಹನ್ ರಾವ್ ಅವರಿಗೆ ಎಂ.ವಿ. ಕಾಮತ್ ಪ್ರಶಸ್ತಿ



ಮಾಜಿ ಪ್ರಧಾನ ವಾರ್ತಾಧಿಕಾರಿ, ಪ್ರಧಾನಮಂತ್ರಿಗಳ ಮಾಜಿ ಮಾಧ್ಯಮ ಸಲಹೆಗಾರ ಮತ್ತು ದೆಹಲಿ ಕರ್ನಾಟಕ ಸಂಘದ ಮಾಜಿ ಅಧ್ಯಕ್ಷ ಶ್ರೀ ಐ. ರಾಮಮೋಹನ್ ರಾವ್ ಅವರಿಗೆ ಪಬ್ಲಿಕ್ ರಿಲೇಶನ್ಸ್ ಕೌನ್ಸಿಲ್ ಆಫ್ ಇಂಡಿಯಾ ಈ ವರ್ಷದಿಂದ ನೀಡುವ ಡಾ. ಎಂ.ವಿ. ಕಾಮತ್ ಸ್ಮಾರಕ ಜೀವಮಾನ ಸಾಧನೆಯ ಪ್ರಶಸ್ತಿಯನ್ನು ನೀಡಿ ಗೌರವಿಸಲಾಗಿದೆ.

ದೆಹಲಿಯಲ್ಲಿ ನಡೆದ ಪಬ್ಲಿಕ್ ರಿಲೇಶನ್ಸ್ ಕೌನ್ಸಿಲ್ ಆಫ್ ಇಂಡಿಯಾದ ಒಂಭತ್ತನೇ ಜಾಗತಿಕ ಸಮ್ಮೇಳನದಲ್ಲಿ ಈ ಪ್ರಶಸ್ತಿಯನ್ನು ಕೇಂದ್ರ ಬುಡಕಟ್ಟು ವ್ಯವಹಾರ ಖಾತೆ ಸಚಿವ ಶ್ರೀ ಜುವಾಲ್ ಒರಂ ಅವರು ಮಾರ್ಚ್ 13ರಂದು ನೀಡಿದರು.

ಶ್ರೀ ರಾಮಮೋಹನ್ ರಾವ್ ಅವರು 1985ರಿಂದ 1992ರವರೆಗೆ ಭಾರತ ಸರಕಾರದ ಪ್ರಧಾನ ವಾರ್ತಾಧಿಕಾರಿಯಾಗಿ ಸೇವೆ ಸಲ್ಲಿಸಿದ್ದರು. ಅದಕ್ಕಿಂತ ಮುಂಚೆ ಅವರು ರಕ್ಷಣಾ ಖಾತೆ ಮತ್ತು ಸಶಸ್ತ್ರ ಪಡೆಯ ವಕ್ತಾರರಾಗಿದ್ದ ಅವರು 1965 ಮತ್ತು 1971ರಲ್ಲಿ ಭಾರತ–ಪಾಕಿಸ್ತಾನದ ನಡುವೆ ನಡೆದ ಯುದ್ಧದ ಕುರಿತು ಪತ್ರಿಕೆಗಳಿಗೆ ಮಾಹಿತಿಯನ್ನು ನೀಡುತ್ತಿದ್ದರು. ಶ್ರೀ ರಾಮಮೋಹನ್ ರಾವ್ ಅವರು ಆಕಾಶವಾಣಿಯ ಸುದ್ದಿ ಸೇವೆ ವಿಭಾಗದ ಮುಖ್ಯಸ್ಥರೂ ಆಗಿದ್ದರು.

ಟೈಂಸ್ ಆಫ್ ಇಂಡಿಯಾ ಮತ್ತು ಇಲ್ಲಸ್ಟ್ರೇಟೆಡ್ ವೀಕ್ಲಿ ಆಫ್ ಇಂಡಿಯಾದ ಸಂಪಾದಕರಾಗಿದ್ದ ಮತ್ತು 2000ದಿಂದ 2005ರ ವರೆಗೆ ಪ್ರಸಾರಭಾರತಿಯ ಅಧ್ಯಕ್ಷರಾಗಿದ್ದ ಡಾ. ಎಂ.ವಿ. ಕಾಮತ್ ಕಳೆದ ಅಕ್ಟೋಬರ್‌ನಲ್ಲಿ ನಿಧನ ಹೊಂದಿದರು. ಈ ಪ್ರಶಸ್ತಿಯನ್ನು ಅವರ ಸ್ಮರಣಾರ್ಥ ಈ ವರ್ಷದಿಂದ ನೀಡಲಾಗುತ್ತಿದೆ. ಅ

**ಅಭಿಮತ ವರದಿ**

# ಎಂ. ವೀರಪ್ಪ ಮೊಯಿಲಿ ಅವರ ರಾಮಾಯಣ ಮಹಾನ್ವೇಷಣಂಗೆ ಸರಸ್ವತಿ ಸಮ್ಮಾನ

ಹಿರಿಯ ರಾಜಕಾರಣಿ, ಸಾಹಿತಿ ಡಾ. ಎಂ. ವೀರಪ್ಪ ಮೊಯಿಲಿ ಅವರ ಮಹಾಕಾವ್ಯ ರಾಮಾಯಣ ಮಹಾನ್ವೇಷಣಂಗೆ 2014ನೇ ಸಾಲಿನ ಪ್ರತಿಷ್ಠಿತ ಸರಸ್ವತಿ ಸಮ್ಮಾನ ಲಭಿಸಿದೆ.

ಕೆ.ಕೆ. ಬಿರ್ಲಾ ಪ್ರತಿಷ್ಠಾನವು 1991ರಲ್ಲಿ ಆರಂಭಿಸಿದ ಸರಸ್ವತಿ ಸಮ್ಮಾನ ಪ್ರಶಸ್ತಿಯನ್ನು ಸಂವಿಧಾನದ ಎಂಟನೇ ಪರಿಚ್ಛೇಧದಲ್ಲಿರುವ ಭಾಷೆಗಳಲ್ಲಿ ರಚನೆಯಾಗಿರುವ ಉತ್ತಮ ಸಾಹಿತ್ಯ ಕೃತಿಗಳಿಗೆ ಪ್ರತಿ ವರ್ಷ ನೀಡಲಾಗುತ್ತಿದೆ. ಈ ಪ್ರಶಸ್ತಿ 10 ಲಕ್ಷ ರೂ. ನಗದು, ಪ್ರಶಸ್ತಿ ಪತ್ರ ಮತ್ತು ಪಾರಿತೋಷಕವನ್ನು ಒಳಗೊಂಡಿದೆ. 2010ನೇ ಸಾಲಿನ ಸರಸ್ವತಿ ಸಮ್ಮಾನವನ್ನು ಕನ್ನಡದ ಖ್ಯಾತ ಸಾಹಿತಿ ಎಸ್.ಎಲ್. ಭೈರಪ್ಪ ಅವರಿಗೆ ನೀಡಲಾಗಿತ್ತು. ಈ ಪ್ರಶಸ್ತಿಗೆ ಹರಿವಂಶ್ ರಾಯ್ ಬಚ್ಚನ್, ರಮಾಕಾಂತ್ ರಥ್, ವಿಜಯ್ ತೆಂಡೂಲ್ಕರ್, ಸುಗಂತ್ ಕುಮಾರಿ, ಗೋವಿಂದ್ ಮಿಶ್ರ ಸೇರಿದಂತೆ ವಿವಿಧ ಸಾಹಿತ್ಯ ದಿಗ್ಗಜರು ಪಾತ್ರರಾಗಿದ್ದಾರೆ.


ಸುಪ್ರೀಂ ಕೋರ್ಟ್‌ನ ಮಾಜಿ ಮುಖ್ಯ ನ್ಯಾಯಮೂರ್ತಿ ಆರ್.ಸಿ. ಲಹೋಟಿ ನೇತೃತ್ವದ 13 ಸದಸ್ಯರ ವಿದ್ವಾಂಸರು ಮತ್ತು ಬರಹಗಾರರ ಸರಸ್ವತಿ ಸಮ್ಮಾನ್ ಆಯ್ಕೆ ಸಮಿತಿಯು 'ರಾಮಾಯಣ ಮಹಾನ್ವೇಷಣಂ' ಕಾವ್ಯದಲ್ಲಿ ಡಾ. ಮೊಯಿಲಿ ಅವರು ಜಾತ್ಯತೀತ ಮತ್ತು ಆಧುನಿಕ ದೃಷ್ಟಿಯಲ್ಲಿ ಮಾದರಿಯಾಗುವಂತಹ ರಾಮರಾಜ್ಯದ ಕುರಿತು ವರ್ಣಿಸಿದ್ದಾರೆ, ಕಲ್ಯಾಣ ರಾಜ್ಯದ ಆದರ್ಶ ಸಿದ್ಧಾಂತಗಳನ್ನು ಮತ್ತು ಆಧುನಿಕ ದೃಷ್ಟಿಕೋನಗಳನ್ನು ಅವರು ತೆರೆದಿಟ್ಟಿದ್ದಾರೆ ಎಂದು ಹೇಳಿದೆ.

ಐದು ಸಂಪುಟಗಳನ್ನು ಒಳಗೊಂಡಿರುವ ರಾಮಾಯಣ ಮಹಾನ್ವೇಷಣಂ ಮಹಾಕಾವ್ಯವು 2007ರಲ್ಲಿ ಕನ್ನಡದಲ್ಲಿ ಮೊದಲು ಪ್ರಕಟಗೊಂಡಿತ್ತು. ನಂತರ ಅದನ್ನು ಇಂಗ್ಲಿಷ್, ಹಿಂದಿ, ತೆಲುಗು ಮತ್ತು ತಮಿಳು ಭಾಷೆಗೆ ಭಾಷಾಂತರಿಸಲಾಗಿತ್ತು. ಡಾ. ಮೊಯ್ಲಿ ಅವರ 'ರಾಮಾಯಣ ಮಹಾನ್ವೇಷಣಂ' ಕಾವ್ಯವು ಭಾರತದ ಸದ್ಯದ ಸ್ಥಿತಿಗತಿಗೆ ಅನುಗುಣವಾಗಿ ಹೊಸ ದೃಷ್ಟಿಕೋನದಲ್ಲಿ ರಾಮಾಯಣವನ್ನು ನೋಡುವ ಪ್ರಯತ್ನವಾಗಿದೆ. ಡಾ. ಮೊಯ್ಲಿ ಅವರು ನಾಲ್ಕು ಕಾದಂಬರಿ, ಮೂರು ಕಾವ್ಯ ಸಂಗ್ರಹ, ಹಲವಾರು ನಾಟಕ ಮತ್ತು ಪ್ರಬಂಧಗಳನ್ನು ಬರೆದಿದ್ದಾರೆ. ಅವರ ಕಾದಂಬರಿಗಳಾದ "ಕೊಟ್ಟ' ಮತ್ತು "ತೆಂಬರೆ' ಹಿಂದಿ, ಇಂಗ್ಲಿಷ್ ಮೊದಲಾದ ಭಾಷೆಗಳಿಗೆ ಭಾಷಾಂತರಗೊಂಡಿವೆ. ಅವರ ಕಾದಂಬರಿ ಸಾಗರದೀಪವನ್ನು ಆಧರಿಸಿ ಚಲನಚಿತ್ರವನ್ನು ಮಾಡಲಾಗಿದೆ.

ಡಾ. ವೀರಪ್ಪ ಮೊಯಿಲಿ ಅವರು ಯುಪಿಎ ಸರಕಾರದಲ್ಲಿ ವಿವಿಧ ಸಮಯದಲ್ಲಿ ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ, ಕಾರ್ಪೋರೇಟ್ ವ್ಯವಹಾರ, ವಿದ್ಯುತ್ ಮತ್ತು ಕಾನೂನು ಸಚಿವರಾಗಿ ಕಾರ್ಯ ನಿರ್ವಹಿಸಿದ್ದರು. ಅವರು 1992 ರಿಂದ 1994ರವರೆಗೆ ಕರ್ನಾಟಕದ ಮುಖ್ಯಮಂತ್ರಿಯಾಗಿಯೂ ಸೇವೆ ಸಲ್ಲಿಸಿದ್ದಾರೆ. ಆರಂಭದಲ್ಲಿ ಕಾರ್ಕಳ ಹಾಗೂ ಮಂಗಳೂರಿನಲ್ಲಿ ವಕೀಲರಾಗಿದ್ದ ಅವರು ಬೆಂಗಳೂರು ಹೈಕೋರ್ಟ್‌ನಲ್ಲಿ ನ್ಯಾಯವಾದಿಯಾಗಿಯೂ ಕಾರ್ಯನಿರ್ವಹಿಸಿದ್ದರು.

ಆಡಳಿತ, ರಾಜಕೀಯ ಮತ್ತು ಸಾಮಾಜಿಕ ಜೀವನದಲ್ಲಿ ಸದಾ ಚಟುವಟಿಕೆಯಲ್ಲಿರುವ ಡಾ. ವೀರಪ್ಪ ಮೊಯ್ಲಿ ಅವರು ತಮ್ಮ ದಿನನಿತ್ಯದ ಬದುಕಿನಲ್ಲಿ ಅಧ್ಯಯನ ಮತ್ತು ಸಾಹಿತ್ಯ ರಚನೆಗಾಗಿ ವಿಶೇಷ ಸಮಯವನ್ನು ನಿಗದಿ ಪಡಿಸಿ ಕೊಂಡಿದ್ದಾರೆ. ಅ

**ಅಭಿಮತ ವರದಿ**







# ವಲಸೆ ಹಕ್ಕಿಗಳು

ಪ್ರಕೃತಿಯ ಒಂದು ಋತುಮಾನದಲ್ಲಿ ಹಕ್ಕಿಗಳು ಬಾನೆತ್ತರದಲ್ಲಿ ಹಾರಾಡುತ್ತ ಒಂದೂರಿನಿಂದ ಇನ್ನೊಂದೂರಿಗೆ ಹೋಗುತ್ತವೆ. ಹೋದ ಊರಿನಲ್ಲಿ ತಮ್ಮ ಗೂಡುಗಳನ್ನು ಕಟ್ಟಿ ಮೊಟ್ಟೆಯಿಟ್ಟು, ಅದಕ್ಕೆ ಕಾವು ಕೊಟ್ಟು ಮರಿಗಳನ್ನು ಮಾಡಿ, ಆ ಮರಿಗಳ ರೆಕ್ಕೆ ಬಲಿಯುವ ತನಕ ಕಾದು ಆ ಮರಿ ಹಕ್ಕಿಗಳೊಂದಿಗೆ ಮತ್ತೆ ತಾವು ಬಂದ ಊರಿಗೆ ಮರಳಿ ಹೋಗುತ್ತವೆ. ಋತು ಚಕ್ರ ಬದಲಾಗುವಂತೆ ಹಕ್ಕಿಗಳು ತಮ್ಮ ವಾಸ ಸ್ಥಾನಗಳನ್ನು ಬದಲಿಸುತ್ತಾ, ತಮಗೆ ಬೇಕಾದ ಆಹಾರ ದೊರಕುವ ಕಡೆ, ಅನುಕೂಲಕರವಾದ ಹವಾಮಾನವಿರುವೆಡೆ, ತಮ್ಮ ಸಂತತಿಯನ್ನು ವೃದ್ಧಿಸಲು ಅನುಕೂಲಕರವಾದ ಪರಿಸರವಿರುವ ಕಡೆ ಸಂಚರಿಸುತ್ತಾ ಇರುತ್ತವೆ.

ಮಾನವ ಜನಾಂಗವು ಕೂಡಾ ಒಂದು ನಾಗರೀಕತೆಯಿಂದ ಮುಂದುವರಿಯುತ್ತಾ ಇನ್ನೊಂದು ಕಡೆ ಸಂಚರಿಸಿ ಹೊಸ ನಾಗರೀಕತೆಯನ್ನು ಕಟ್ಟುತ್ತಾ ಬಂದಿದೆ. ನೈಸರ್ಗಿಕ ಅಪಾಯಗಳು ಎದುರಾದಾಗ ತಾವಿದ್ದ ಊರು ಬಿಟ್ಟು ಹೊಸತೊಂದು ಅನುಕೂಲಕರವಾದ ಊರಿಗೆ ಹಾದಿ ಹುಡುಕಿದ್ದಾರೆ. ಹಾಗಾಗಿಯೇ ನದೀತಟಗಳು, ಬಯಲು ಪ್ರದೇಶಗಳು ಮತ್ತು ಉತ್ತಮ ಹವಾಮಾನವಿರುವ ಪ್ರದೇಶಗಳು ಹಿಂದಿನಿಂದಲೇ ನಗರಗಳಾಗಿ ಬೆಳೆದಿವೆ. ಆದರೆ ಆಧುನಿಕ ಯುಗದ ನಮ್ಮ ಕಾಲದ ಮಾನವರು ವಿಶ್ವಾದ್ಯಂತ ಸಂಚರಿಸುತ್ತಾ, ಕೆಲವೊಮ್ಮೆ ಒಂದೆಡೆ ತಮ್ಮ ಬಿಡಾರವನ್ನು ಶಾಶ್ವತವಾಗಿರಿಸಿದರೆ, ಕೆಲವೊಮ್ಮೆ ತಮ್ಮ ಜೀವಿತಾವಧಿಯಲ್ಲಿ ಹತ್ತು ಹಲವು ಕಡೆ ನೆಲೆಸಿ ಬದುಕುತ್ತೇವೆ. ದೆಹಲಿಯಂತಹ ಮಹಾನಗರದಲ್ಲಿರುವ ಬಹುತೇಕ ಕನ್ನಡದ ಕುಟುಂಬಗಳು ಮೊದಲ ತಲೆಮಾರಿನ ವಲಸೆಗಾರರು. ಈ ನಂತರದ ಎರಡನೇ ಅಥವಾ ಮೂರನೇ ತಲೆಮಾರಿನಲ್ಲಿ ಕನ್ನಡದ ಕುಟುಂಬಗಳು ದೆಹಲಿಯಲ್ಲಿಯೇ ನೆಲೆಸಿರುವುದು ಕಡಿಮೆ. ನಂತರದ ತಲೆಮಾರಿನ ಕುಟುಂಬಗಳು ದೆಹಲಿ ಬಿಟ್ಟು ಹೊರದೇಶಕ್ಕೆ ಹೋಗಿರಲೂ ಬಹುದು ಅಥವಾ ಮರಳಿ ತಾಯ್ನಾಡಿಗೆ ಮರಳಿರಲೂ ಬಹುದು.

ತಾಯ್ನಾಡಿನಿಂದ ಬಂದ ಕುಟುಂಬಗಳು ತಾವು ಕಳೆದ ಬಾಲ್ಯದ ದಿನಗಳ ನೆನಪಿನಲ್ಲಿ ದೆಹಲಿಯಲ್ಲಿ ಕನ್ನಡ ಭಾಷೆ ಮತ್ತು ಸಂಸ್ಕೃತಿಯನ್ನು ತನ್ನದಾಗಿಸಿಕೊಂಡು ಅದನ್ನು ಗಟ್ಟಿಯಾಗಿಸುವ ಪ್ರಯತ್ನದಲ್ಲಿರುತ್ತವೆ. ಆದರೆ, ಇಲ್ಲಿಯೇ ಹುಟ್ಟಿ ಬೆಳೆದ ಎರಡನೇ ಮೂರನೇ ತಲೆಮಾರಿನ ಕುಟುಂಬಗಳು ಮತ್ತು ಮಕ್ಕಳು ಕನ್ನಡದ ಸಂಸ್ಕೃತಿಯನ್ನು ಇಲ್ಲಿ ಸೃಷ್ಟಿಸುವುದು ಸುಲಭ ಸಾಧ್ಯವಲ್ಲ.

ದೆಹಲಿ ಕರ್ನಾಟಕ ಸಂಘವು ಮಾರ್ಚ್ ಮತ್ತು ಏಪ್ರಿಲ್ ತಿಂಗಳುಗಳಲ್ಲಿ ನಡೆಸುತ್ತಿರುವ ನೃತ್ಯ, ರಂಗಭೂಮಿ ಮತ್ತು ಸಂಗೀತ ಕಾರ್ಯಕ್ರಮಗಳು ಕನ್ನಡದ ಎರಡನೇ ಮತ್ತು ಮೂರನೇ ತಲೆಮಾರಿನ ಮಕ್ಕಳಲ್ಲಿ ತಾಯ್ನಾಡಿನ ಸಂಸ್ಕೃತಿಯನ್ನು ತಮ್ಮದೇ ರೀತಿಯಲ್ಲಿ ಅರ್ಥೈಸುವ ಪ್ರಯತ್ನಗಳಾಗಿವೆ. ಇಂತಹ ಪ್ರಯತ್ನಗಳು ದೆಹಲಿಯಲ್ಲಿ ಕನ್ನಡವನ್ನು ಉಳಿಸಿ ಬೆಳೆಸುವ ಸಂಘದ ಧ್ಯೇಯದ ಪ್ರತೀಕಗಳಾಗಿವೆ.

ಬಾಲಕೃಷ್ಣ ನಾಯ್ಕ್ ಡಿ.

## ಓದುಗರ ಪತ್ರ




### ಡಾ. ಸರೋಜಿನಿ ಮಹಿಷಿಯವರಿಗೆ ಸ್ಮಾರಕ

ಡಾ. ಸರೋಜಿನಿ ಮಹಿಷಿಯವರ ಕುರಿತು ಅಭಿಮತದಲ್ಲಿ ಪ್ರಕಟಿಸಿದ 'ಮರೆಯಾದ ಮಹಾತಾಯಿ' ಡಾ. ಪುರುಷೋತ್ತಮ ಬಿಳಿಮಲೆಯವರ ಸುದೀರ್ಘ ಲೇಖನ ಒಂದು ವಿಶಿಷ್ಠ ಕೊಡುಗೆ. ಡಾ. ಮಹಿಷಿಯವರ ಪೂರ್ಣದೇಹಾಕೃತಿಯ ಪ್ರತಿಮೆ ದೆಹಲಿ ಕರ್ನಾಟಕ ಸಂಘದ ಆವರಣದಲ್ಲಿ ಆಗಬೇಕು. ಇದಕ್ಕೆ ಮತ್ತು ದೆಹಲಿ ನಗರದಲ್ಲಿ ಆಗುವ ಪ್ರತಿಮೆಗೆ ಕರ್ನಾಟಕದಾದ್ಯಂತ ಕನ್ನಡಿಗರು ವೆಚ್ಚವನ್ನು ಭರಿಸುತ್ತಾರೆ.

ಮಹಾತಾಯಿ ನೀಡಿದ "ಡಾ. ಸರೋಜಿನಿ ಮಹಿಷಿ ವರದಿ" ಕನ್ನಡಿಗರಿಗೆ ನೀಡಿದ ಶಾಶ್ವತ ವರದಿ. ಡಾ. ಮಲ್ಲಿಕಾರ್ಜುನ ಮನ್ಸೂರ್‌ರವರ 75ನೇ ಜನ್ಮದಿನೋತ್ಸವದ ಉದ್ಘಾಟನೆಗೆ ಎಸ್. ನಿಜಲಿಂಗಪ್ಪನವರನ್ನು ಧಾರವಾಡಕ್ಕೆ ರೈಲಿನಲ್ಲಿ ಕರೆದೊಯ್ಯುವ ಜವಾಬ್ದಾರಿ ನನ್ನದಾಗಿತ್ತು. ರೈಲಿನಲ್ಲಿ ನಿಜಲಿಂಗಪ್ಪನವರು ಪ್ರಯಾಣಿಸುತ್ತಿದ್ದ ಸುದ್ದಿ ತಿಳಿದು ಡಾ. ಮಹಿಷಿಯವರು ರೈಲುಬೋಗಿಗೆ ಬಂದು ನಾನು ನೀಡಿದ ಫಲಾಹಾರ ಸ್ವೀಕರಿಸಿ ನನ್ನೊಡನೆ ಮಾತಾಡಿದರು. "ನಿಜಲಿಂಗಪ್ಪನವರು ಅತ್ಯಂತ ಉದಾರಿ, ಪ್ರಾಮಾಣಿಕ ರಾಜಕಾರಣಿ ಮತ್ತು ಕರ್ನಾಟಕ ಏಕೀಕರಣಕ್ಕೆ ದುಡಿದೆ ಮುತ್ಸದ್ಧಿ" ಎಂದು ನುಡಿದರು. ಇವರ ಮಾತುಗಳು ಮರೆಯಲಾರದ ನನ್ನ ನೆನಪುಗಳು. ನಂತರ ನಿಜಲಿಂಗಪ್ಪನವರ ಜೊತೆ ಮಾತುಕತೆ ನಡೆಸಿದರು. ಇವರು ಧಾರವಾಡದಲ್ಲಿ ನೆಲೆಸಿ ಕನ್ನಡಿಗರಿಗೆ ಸಿಗುವಂತಾಗಿರಬೇಕಾಗಿತ್ತು. ಹೊರರಾಜ್ಯದಲ್ಲಿ ನೆಲೆಸಿ ಬಾಡಿಗೆ ಮನೆಯಲ್ಲಿ ನಿಧನರಾಗಿದ್ದು ನೋವಿನ ಸಂಗತಿ.

*ಡಾ.ಎಂ.ಎಸ್. ಮಹಲಿಂಗಪ್ಪ,*
*ತುಮಕೂರು*

### ಅಪೂರ್ವವಾದ ವಿವರಣೆ

ಅಭಿಮತದ ಮುಖಪುಟದಲ್ಲಿಯೇ ವಿರಾಜಿಸಿ ಇಂದಿನ ಕನ್ನಡ ಪ್ರೇಮಿಗಳೆಲ್ಲವರ ನೆನವರಿಕೆಗನುವಾಗಿಸಿದ ಪರಮ ಸಜ್ಜನೆ ಪಾವನೆ ಅನ್ನಿಸಿದ ಡಾ. ಸರೋಜಿನಿ ಮಹಿಷಿಯವರಿಗಭಿನಮಿಸಿ ಪೊರೆ ಜನನೀ ಜಗನ್ಮಾತೆ ಅನ್ನಿಸಿದ ಅವರ ದಿವ್ಯಾತ್ಮಕ್ಕೆ ಶಾಂತಿ ನೀಡುವ ಹಾಗೆ ದಿವ್ಯ ಶಕ್ತಿಯೊಂದಿಗೆ ನಾವು ಪ್ರಾರ್ಥನೆ ಸಲ್ಲಿಸುತ್ತಿದ್ದೇವೆ.

ಒಳಪುಟಗಳಲ್ಲಿನ ಎಲ್ಲಾ ವಿವರಣೆಗಳೂ ಅಪೂರ್ವ ಅನ್ನಿಸಿಕೊಂಡವು. ದೆಹಲಿ ಕರ್ನಾಟಕ ಸಂಘದ ಜನನಿ ಅನ್ನಿಸಿ ಮೆರೆದ ಇವರ ಹಿಂದಿನ ಒಂದೆರಡು ವಿವರಣೆಗಳನ್ನು ದಾಖಲಿಸಿದ ರೀತಿ ವಿಶಿಷ್ಟವೆನ್ನಿಸಿತು. ಅಖಿಲ ಭಾರತ ಹೊರನಾಡ ಕನ್ನಡ ಸಂಘಗಳ ಮಹಾಮೇಳದ ಸಚಿತ್ರ ವರದಿ ಕಣ್ಮನತುಂಬಿಸಿಕೊಂಡವು. ಪೂರ್ತಿ ಸಂಚಿಕೆಯ ಜೋಡಣೆಗೆ ಮೆಚ್ಚಲೇಬೇಕು. ಅಭಿನಂದನೆಗಳು.

*ಕೀರಿಕ್ಕಾಡು ವನಮಾಲಾ*
*ಕೇಶವಭಟ್ಟ,*
*ಕಾಸರಗೋಡು.*


**SAUJANYA** PRINTING PRESS
A HOUSE OF QUALITY PRINTING

ರಾಷ್ಟ್ರದ ರಾಜಧಾನಿಯಲ್ಲಿ ಕನ್ನಡಿಗರೊಬ್ಬರ ಬಹುವರ್ಣದ ಸುಸಜ್ಜಿತ ಮುದ್ರಣಾಲಯ
ಸೌಜನ್ಯ ಪ್ರಿಂಟಿಂಗ್ ಮತ್ತು ಎಚ್.ಪಿ. ಗ್ರಾಫಿಕ್ ಪ್ರಿಂಟರ್ಸ್
ಇಲ್ಲಿ ಎಲ್ಲಾ ಬಗೆಯ ಮುದ್ರಣ ಕಾರ್ಯಗಳನ್ನು ಸಮಯಕ್ಕೆ ಸರಿಯಾಗಿ ಅಚ್ಚುಕಟ್ಟಾಗಿ ಮಾಡಿಕೊಡಲಾಗುವುದು.
ಪ್ರೊಸೆಸಿಂಗ್, ಪ್ಲೇಟ್ ಮೇಕಿಂಗ್, ಪ್ರಿಂಟಿಂಗ್ ಮತ್ತು ಬೈಂಡಿಂಗ್ ಕೆಲಸಗಳಿಗಾಗಿ ದಯವಿಟ್ಟು ಸಂಪರ್ಕಿಸಿ

C-95, Okhla Industrial Area Phase-I, New Delhi – 110 020

E-MAIL: saujanyapp2010@gmail.com / hpgp2006@gmail.com
PHONE: 011-40520770 MOBILE:9811104398,,9811604398

# ದೆಹಲಿ ಕರ್ನಾಟಕ ಸಂಘದ ವಿದ್ಯಾರ್ಥಿ ವೇತನ ವಿಜೇತರು





Delhi Karnataka Sangha Abhimatha Monthly,
April-2015, Vol. No.25, Issue No.5, Price Rs.1/- RNI Regn. No. 53405/91, DL-SW-1/4016/13-15
Printout Date : April. 8th / 9th, Postal Date :10th / 11th, Total Pages-20
Printed & Published by C.M. Nagaraja, General Secretary on behalf of Delhi Karnataka Sangha (R)
Rao Tularam Marg, Sector-12, R.K.Puram, New Delhi-110022, Tel: 26109615
Printed at Saujanya Printing Press C-95, Okhla Industrial Area, Phase-I, New Delhi-110020, Tel: 40520770, Editor: Balakrishna Naik D.